ಸಂಪುಟ 01 | ಸಂಚಿಕೆ 221 ಗುರುವಾರ 15 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ವಿದ್ಯಾರ್ಥಿಗಳ ದಿನ (World Students' Day)
ಅಕ್ಟೋಬರ್ 15 ಭಾರತದ ಮಾಜಿ ರಾಷ್ಟ್ರಪತಿ ಮತ್ತು ಖ್ಯಾತ ವಿಜ್ಞಾನಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮದಿನದ ಸ್ಮರಣಾರ್ಥ ಭಾರತದಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ.

2)ಜಾಗತಿಕ ಕೈತೊಳೆಯುವ ದಿನ (Global Handwashing Day)ಸಾಬೂನು ಮತ್ತು ನೀರಿನಿಂದ ಸರಿಯಾಗಿ ಕೈತೊಳೆಯುವ ಮಹತ್ವವನ್ನು ತಿಳಿಸುವ ದಿನ.

ಸುಭಾಷಿತ


ಮನಸ್ಸು ಪರಿಶುದ್ಧವಾಗಿದ್ದರೆ, ಸಂತೋಷ ನೆರಳಿನಂತೆ ನಮ್ಮನ್ನ ಹಿಂಬಾಲಿಸುತ್ತದೆ.

-ಭಗವಾನ್ ಬುದ್ಧ

ಮಾಜಿ ಪುರಸಭೆ ಸದಸ್ಯ ಎಂ.ಸಿ. ಮಾಯಪ್ಪ ನಿಧನ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಪಟ್ಟಣದ 15ನೇ ವಾರ್ಡಿನ ಛಲುವಾದಿ ಸಮಾಜದ ಹಿರಿಯ ಮುಖಂಡ ಮತ್ತು ಪುರಸಭೆ ಮಾಜಿ ಸದಸ್ಯ ಎಂ.ಸಿ.ಮಾಯಪ್ಪ(78) ಅನಾರೋಗ್ಯದಿಂದ ಬುಧವಾರ ನಿಧನರಾದರು.



ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶವ ಸಂಸ್ಕಾರ ಇಲ್ಲಿನ ಸಣಾಪುರ ರಸ್ತೆಯ ರುದ್ರಭೂಮಿಯಲ್ಲಿ ಗುರುವಾರ ನಡೆಯಲಿದೆ. ಕಂಪ್ಲಿ ಪುರಸಭೆಯ ಮಾಜಿ ಸದಸ್ಯರಾಗಿ ಸಾರ್ವಜನಿಕ ಸೇವೆ ಸಲ್ಲಿಸಿದ್ದರು. ಚಲುವಾದಿ ಮಹಾಸಭಾದ ರಾಜ್ಯ ಮುಖ್ಯಸ್ಥರಾಗಿಯೂ ಜವಾಬ್ದಾರಿ ನಿಭಾಯಿಸಿದ್ದ ಇವರು, ವಿವಿಧ ಸಾಮಾಜಿಕ, ಧಾರ್ಮಿಕ ಮತ್ತು ಪ್ರಗತಿಪರ ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸಮಾಜದ ಶ್ರೇಯೋಭಿವೃದ್ಧಿಗಾಗಿ ಮತ್ತು ಶೋಷಿತ ವರ್ಗಗಳ ಹಕ್ಕುಗಳಿಗಾಗಿ ಅವರು ನಿರಂತರವಾಗಿ ಶ್ರಮಿಸಿದ್ದರು. ಕರ್ನಾಟಕ ರಾಜ್ಯ ಚಲುವಾದಿ ಮಹಾಸಭಾದ ಪದಾಧಿಕಾರಿಗಳು ಹಾಗೂ ಸಮಾಜದ ಪ್ರಮುಖರು, ಗಣ್ಯರು ತೀವ್ರ ಸಂತಾಪ ಸೂಚಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಸನ್ ರೈಸ್ ಸಂಸ್ಥೆಯ ಆಶು ಪಾಷಾ, ಶೋಭಾ, ಸಾಗರ್ ಹಾಗೂ ನೂರ್ ಮೊಹಮ್ಮದ್‌ಗೆ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ

ಗುರುಗಳ ಸೇವೆಗೆ ಸಂದ ಗೌರವ ಸಂಸ್ಥೆಯ ಹೆಮ್ಮೆಯನ್ನು ಹೆಚ್ಚಿಸಿದ ನಾಲ್ವರು ಉಪನ್ಯಾಸಕರು

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನಾರ್ಜನೆ, ಮೌಲ್ಯಾಧಾರಿತ ಶಿಕ್ಷಣ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡುತ್ತಿರುವ ನಗರದ ಪ್ರತಿಷ್ಠಿತ ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ನಾಲ್ವರು ಉಪನ್ಯಾಸಕರಿಗೆ ತಾಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಗುರು ಶ್ರೇಷ್ಠ' ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು. ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನ ಉಪನ್ಯಾಸಕ ಆಶು ಪಾಷಾ, ಸನ್ ರೈಸ್ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ಶೋಭಾ,

ಸನ್ ರೈಸ್ ಡಿ-ಫಾರ್ಮಸಿ ಕಾಲೇಜಿನ ಉಪನ್ಯಾಸಕ ಸಾಗರ್ ಹಾಗೂ ಸಂಸ್ಥೆಯ ಆಂಗ್ಲ ಭಾಷಾ ಉಪನ್ಯಾಸಕ ನೂರ್ ಮೊಹಮ್ಮದ್ ಅವರು ಈ ಗೌರವಕ್ಕೆ ಭಾಜನರಾಗಿದ್ದಾರೆ.ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರು ಸಲ್ಲಿಸುತ್ತಿರುವ ಅಮೂಲ್ಯ ಸೇವೆಯನ್ನು ಗುರುತಿಸಿ, ಅವರ ಪರಿಶ್ರಮ, ಬದ್ಧತೆ, ಸಾಧನೆ ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ವಹಿಸುತ್ತಿರುವ ಪಾತ್ರವನ್ನು ಗೌರವಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಪ್ರಶಸ್ತಿಗೆ ಸನ್ ರೈಸ್ ಸಂಸ್ಥೆಯ ನಾಲ್ವರು ಉಪನ್ಯಾಸಕರು ಆಯ್ಕೆಯಾಗಿರುವುದು ಸಂಸ್ಥೆಯ ಶೈಕ್ಷಣಿಕ ಸಾಧನೆಗೆ ಮತ್ತೊಂದು ಗರಿಯನ್ನು ಸೇ-ರಿಸಿದಂತಾಗಿದೆ.ನಾಲ್ವರು ಉಪನ್ಯಾಸಕರಿಗೆ ಸನ್ ರೈಸ್ ಕಾಲೇಜಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷರಾದ ಇರ್ಫಾನ್ ಕೆ. ಅವರು, ಶಿಕ್ಷಕ ವೃತ್ತಿಯು ಕೇವಲ ಉದ್ಯೋಗವಲ್ಲ; ಅದು ಸಮಾಜದ ಭವಿಷ್ಯವನ್ನು ರೂಪಿಸುವ ಮಹತ್ತರ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಜ್ಞಾನವನ್ನು ನೀಡುವುದರ ಜೊತೆಗೆ ಅವರಲ್ಲಿ ಮಾನವೀಯ ಮೌಲ್ಯಗಳು, ಶಿಸ್ತು, ಸಮಯಪ್ರಜ್ಞೆ, ಆತ್ಮವಿಶ್ವಾಸ, ಸೇವಾ ಮನೋಭಾವ ಹಾಗೂ ವೃತ್ತಿಪರ ಕೌಶಲಗಳನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿಶೇಷವಾಗಿ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ, ಭವಿಷ್ಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಜವಾಬ್ದಾ-ರಿಯುತ ವೃತ್ತಿಪರರನ್ನಾಗಿ ರೂಪಿಸುವ ಹೊಣೆಗಾ-ರಿಕೆಯನ್ನು ಹೊಂದಿದ್ದಾರೆ ಎಂದು ತಿಳಿಸಿದರು.ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಯ ಜೀವನಕ್ಕೆ ಸರಿಯಾದ ದಿಕ್ಕು ತೋರಿಸುವ ಮಾರ್ಗದರ್ಶಿಯಾಗಿರುತ್ತಾನೇ ಶಿಕ್ಷಕರು ನೀಡುವ ಪ್ರೇರಣೆ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ವಿದ್ಯಾರ್ಥಿಗಳ ಜೀವನದಲ್ಲಿ



ಮಹತ್ತರ ಬದಲಾವಣೆಯನ್ನು ತರಬಲ್ಲದು. ಆದ್ದರಿಂದ ಶಿಕ್ಷಕರ ಸೇವೆಯನ್ನು ಗುರುತಿಸಿ ಗೌರವಿಸುವ ಇಂತಹ ಪ್ರಶಸ್ತಿಗಳು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೆ ಇನ್ನಷ್ಟು ಉತ್ಸಾಹ ತುಂಬುತ್ತವೆ ಎಂದು ಹೇಳಿದರು.ಸನ್ ರೈಸ್ ಸಂಸ್ಥೆಯ ಉಪನ್ಯಾಸಕರು ತಮ್ಮ ಜವಾಬ್ದಾ-ರಿಯನ್ನು ಸಮರ್ಪಣಾ ಮನೋಭಾವದಿಂದ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ನಮ್ಮ ಸಂಸ್ಥೆಯ ನಾಲ್ವರು ಉಪನ್ಯಾಸಕರಿಗೆ 'ಗುರು ಶ್ರೇಷ್ಠ' ಪ್ರಶಸ್ತಿ ದೊರೆತಿರುವುದು ಅವರ ವೈಯಕ್ತಿಕ ಸಾಧನೆಯ ಜೊತೆಗೆ ಇಡೀ ಸಂಸ್ಥೆಗೆ ಸಂದ ಗೌರವವಾಗಿದೆ. ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಸಂಸ್ಥೆಯ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕು ಎಂದು ಆಶಿಸಿದರು.ಸನ್ ರೈಸ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರ ಕೊಡುಗೆ ಅಪಾರವಾಗಿದೆ. ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ, ಶಿಸ್ತು ಮತ್ತು ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ವಿಶೇಷವಾಗಿ ನರ್ಸಿಂಗ್, ಫಾರ್ಮಸಿ ಹಾಗೂ ಪ್ಯಾರಾ ಮೆಡಿಕಲ್ ಶಿಕ್ಷಣವು ನೇರವಾಗಿ ಆರೋಗ್ಯ ಸೇವೆಯೊಂದಿಗೆ ಸಂಬಂಧ ಹೊಂದಿರುವುದರಿಂದ, ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಜ್ಞಾನದ ಜೊತೆಗೆ ಪ್ರಾಯೋಗಿಕ ಕೌಶಲ, ಮಾನವೀಯತೆ ಹಾಗೂ ವೃತ್ತಿಪರ ಜವಾಬ್ದಾ-ರಿಯನ್ನು ಬೆಳೆಸುವುದು ಅತ್ಯಗತ್ಯ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಭವಿಷ್ಯದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಾಗ ರೋಗಿಗಳ ಬಗ್ಗೆ ಕಾಳಜಿ, ಕರ್ತವ್ಯನಿಷ್ಠೆ, ಸಮಯಪ್ರಜ್ಞೆ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಇಂತಹ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಉಪನ್ಯಾಸಕರು ನಿರಂತರವಾಗಿ ಶ್ರಮಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ



ಉಪನ್ಯಾಸಕರ ಸೇವೆಯನ್ನು ಗುರುತಿಸಿ 'ಗುರು ಶ್ರೇಷ್ಠ' ಪ್ರಶಸ್ತಿ ನೀಡಿ ಗೌರವಿಸುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಪ್ರಶಸ್ತಿಗಳು ವ್ಯಕ್ತಿಯ ಸಾಧನೆಯನ್ನು ಗುರುತಿಸುವುದರ ಜೊತೆಗೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರೇರಣೆ ನೀಡುತ್ತವೆ. ಪ್ರಶಸ್ತಿ ಪಡೆದ ಉಪನ್ಯಾಸಕರು ತಮ್ಮ ಜವಾಬ್ದಾರಿಯನ್ನು ಇನ್ನಷ್ಟು ಪರಿಣಾಮಕಾ-ರಿಯಾಗಿ ನಿರ್ವಹಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಕೊಡುಗೆ ನೀಡಲಿ ಎಂದು ಶುಭ ಹಾರೈಸಿದರು.ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜಿನ ಉಪನ್ಯಾಸಕ ಆಶು ಪಾಷಾ, ಸನ್ ರೈಸ್ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ಶೋಭಾ, ಸನ್ ರೈಸ್ ಡಿ-ಫಾರ್ಮಸಿ ಕಾಲೇಜಿನ ಉಪನ್ಯಾಸಕ ಸಾಗರ್ ಹಾಗೂ ಆಂಗ್ಲ ಭಾಷಾ ಉಪನ್ಯಾಸಕ ನೂರ್ ಮೊಹಮ್ಮದ್ ಅವರು 'ಗುರು ಶ್ರೇಷ್ಠ' ಪ್ರಶಸ್ತಿಗೆ ಭಾಜನರಾಗಿರುವುದು ಸಂಸ್ಥೆಯ ಉಪನ್ಯಾಸಕ ವೃಂದದಲ್ಲಿ ಸಂತಸ ಮೂಡಿಸಿದೆ.ವಿವಿಧ ಶೈಕ್ಷಣಿಕ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಉಪನ್ಯಾಸಕರಿಗೆ ದೊರೆತಿರುವ ಗೌರವವು ಅವರ ವೃತ್ತಿಪರ ಬದ್ಧತೆ ಹಾಗೂ ಶಿಕ್ಷಣ ಕ್ಷೇತ್ರದ ಸೇವೆಗೆ ದೊರೆತ ಮನ್ನಣೆಯಾಗಿದೆ. ಶಿಕ್ಷಕರ ಸಾಧನೆಯನ್ನು ಗುರುತಿಸಿ ಗೌರವಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಆರೋಗ್ಯಕರ ಸ್ಪರ್ಧೆ, ಪರಸ್ಪರ ಪ್ರೋತ್ಸಾಹ ಹಾಗೂ ಗುಣಮಟ್ಟದ ಬೋಧನೆಗೆ ಉತ್ತೇಜನ ನೀಡಬಹುದು ಎಂಬುದಕ್ಕೆ ಈ ಪ್ರಶಸ್ತಿ ಕಾರ್ಯಕ್ರಮ ಉತ್ತಮ ಉದಾಹರಣೆಯಾಗಿದೆ. ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಶಿಕ್ಷಣದ ಜೊತೆಗೆ ವೈದ್ಯಕೀಯ ಹಾಗೂ ಆರೋಗ್ಯ ಸೇವಾ ಕ್ಷೇತ್ರಕ್ಕೆ ಅಗತ್ಯವಿರುವ ನುರಿತ ಮಾನವ ಸಂಪನ್ಮೂಲವನ್ನು ರೂಪಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯ ಉಪನ್ಯಾಸಕ-ರಿಗೆ ದೊರೆತಿರುವ ಈ ಪ್ರಶಸ್ತಿಗಳು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಲು ಮತ್ತಷ್ಟು ಪ್ರೇರಣೆ ನೀಡಲಿವೆ ಎಂಬ ವಿಶ್ವಾಸವನ್ನು ಸಂಸ್ಥೆಯ ಆಡಳಿತ

ಮಂಡಳಿ ವ್ಯಕ್ತಪಡಿಸಿತು.ಈ ಸಂದರ್ಭದಲ್ಲಿ ಸನ್ ರೈಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷರಾದ ಇರ್ಫಾನ್ ಕೆ., ಕಾರ್ಯದರ್ಶಿ ಇರ್ಷಾದ್ ಕೆ., ಡಿ-ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ವಾಸಿಂ ಹುಸೇನ್, ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಲಾಜರ್ ಸಿರಿಲ್, ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಿ. ಚಕ್ರವರ್ತಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ರಾಜೇಶ್, ಆಶು ಪಾಷಾ, ಸಂತೋಷಿ, ಸುಧಾ, ವೀರೇಶ್, ಶೋಭಾ, ಚೈತ್ರಾ, ದಿಲೀಪ್, ಸಾಗರ್, ಹರ್ಷಿತಾ, ಸುರೇಶ್ ಯಾದವ್, ವೀರಭದ್ರಯ್ಯ ಸ್ವಾಮಿ, ಪುಟ್ಟರಾಜು, ಮೂಸಾ ಸೇ-ರಿದಂತೆ ಸಂಸ್ಥೆಯ ಇತರ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಪ್ರಶಸ್ತಿ ಪುರಸ್ಕೃತ-ರಿಗೆ ಅಭಿನಂದನೆ ಸಲ್ಲಿಸಿದರು.ಶಿಕ್ಷಕರ ಸೇವೆಗೆ ಸಂದ ಗೌರವ, ಶಿಕ್ಷಣ ಕ್ಷೇತ್ರದ ಸಾಧನೆಗೆ ದೊರೆತ ಪ್ರೋತ್ಸಾಹ ಹಾಗೂ ಸನ್ ರೈಸ್ ಸಂಸ್ಥೆಯ ಶೈಕ್ಷಣಿಕ ಬದ್ಧತೆಗೆ ಸಾಕ್ಷಿಯಾದ ಈ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಸಂಸ್ಥೆಯ ಉಪನ್ಯಾಸಕ ವೃಂದದಲ್ಲಿ ಹೊಸ ಉತ್ಸಾಹ ಮತ್ತು ಸಂತಸವನ್ನು ಮೂಡಿಸಿತು.





ಪಟ್ಟಣದ ಅಭಿವೃದ್ಧಿಗೆ ಹಾಜಿ ಚೌದರಿ ಅವರ ಬದ್ಧತೆ ಸಿರವಾರದಲ್ಲಿ ಎಲ್.ಇ.ಡಿ ದೀಪಗಳ ಅಳವಡಿಕೆ

ನೈಜ್ಯ ದೆಸೆ ನ್ಯೂಸ್

ಅ: 14 ಸಿರವಾರ ವಿಜಯದಶಮಿ ಹಾಗೂ ನಾಡಹಬ್ಬ ದಸರಾ ನಿಮಿತ್ತ ಸಿರವಾರ ಪಟ್ಟಣದ ಮುಖ್ಯರಸ್ತೆಯ ವಿಭಜಕಗಳಲ್ಲಿ ನೂತನ ಎಲ್.ಇ.ಡಿ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದ್ದು, ಪಟ್ಟಣ ವಿದ್ಯುತ್ ದೀಪಗಳ ಬೆಳಕಿನಲ್ಲಿ ಕಂಗೊಳಿಸುತ್ತಿದೆ.

ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳಾದ ಜಗನ್ನಾಥ್ ಜೋಶಿ ಹಾಗೂ ಪಟ್ಟಣ ಪಂಚಾಯತಿ ಅಧ್ಯಕ್ಷರಾದ ಹಾಜಿ ಚೌದ್ರಿ ಅವರ ನೇತೃತ್ವದಲ್ಲಿ ಈ ಎಲ್.ಇ.ಡಿ ದೀಪಗಳನ್ನು ಅಳವಡಿಸುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಹಬ್ಬದ ಸಂಭ್ರಮದ ವೇಳೆಯಲ್ಲಿ ನೂತನ ವಿದ್ಯುತ್



ದೀಪಾಲಂಕಾರದಿಂದ ಪಟ್ಟಣಕ್ಕೆ ಹೊಸ ಮೆರುಗು ಬಂದಂತಾಗಿದ್ದು, ಸಾರ್ವಜನಿಕರ ಹಾಗೂ ಪ್ರಯಾಣಿಕರ ಗಮನ ಸೆಳೆಯುತ್ತಿದೆ.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಉಪಾಧ್ಯಕ್ಷರಾದ ಲಕ್ಷ್ಮಿ ಆದೆಪ್ಪ ನಾಯಕ್, ಸದಸ್ಯರಾದ ಹುಸೇನಲಿ ಸಾಬ್, ವೈ. ಭೂಪನಗೌಡ, ಮೌಲಾಸಾಬ್, ಅಂಬರೀಶ್ ಗಡ್ಲಾ, ಸೂರಿ ದುರ್ಗಣ್ಣ,ಮಾರಕಪ್ಪ ಅಜಿತ್ ಹೊನ್ನಟಾಗಿ, ಹಾಗೂ ಪಟ್ಟಣ ಪಂಚಾಯತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ತಾಪಂ,ಜಿಪಂ ಮೀಸಲಾತಿ ಪಟ್ಟಿಯಲ್ಲಿ ಸಾಮಾನ್ಯ ವರ್ಗಕ್ಕೆ ಅನ್ಯಾಯ,ಸರಿಪಡಿಸಲು ಆಗ್ರಹ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಿಧಾನಸಭಾ ಕ್ಷೇತ್ರದಲ್ಲಿ ಜಿಪಂ, ತಾಪಂ ಚುನಾವಣೆ ಮೀಸಲಾತಿ ಪ್ರಕಟಗೊಂಡ ಕರಡು ಪಟ್ಟಿಯಲ್ಲಿ ಸಾಮಾನ್ಯ ವರ್ಗಕ್ಕೆ ಸರಿಯಾದ ಮೀಸಲಾತಿ ಪ್ರಕಟಣೆಗೊಂಡಿಲ್ಲ ಇದರಿಂದ ಸಾಮನ್ಯ ವರ್ಗಕ್ಕೆ ರಾಜ-ಕೀಯವಾಗಿ ಬಹಳಷ್ಟು ಹಿನ್ನಡೆಯಾಗಿದೆ ಎಂದು ಹಾಲಾಪೂರದ ಸಾಮನ್ಯ ವರ್ಗದ ಜನಾಂಗದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ,

ವಿಶೇಷವಾಗಿ ಹಾಲಾಪೂರ ತಾಪಂ, ತೊರಣದಿನ್ನಿ ಜಿಪಂ ಕಳೆದ 32 ವರ್ಷಗಳಿಂದ ಸಾಮಾನ್ಯ ವರ್ಗಕ್ಕೆ ಮೀಸಲಾತಿ ಬಂದಿಲ್ಲ,ಇದಕ್ಕೆ ಚುನಾವಣೆ ಆಯೋಗ ಯಾವ ಮಾನದಂಡದ ಮೇಲೆ ಮೀಸಲಾತಿ



ಪ್ರಕಟಣೆ ಮಾಡಿದೆ ಅಥವಾ ಯಾರೊ ಪ್ರಭಾವಿಗಳ ಒತ್ತಡಕ್ಕೆ ಮಣಿದಿದಿಯಾ ಎಂಬ ಉಹಾಪೊಹ ಹರಡಿದ್ದು,

ಅದಕ್ಕೆ ಆಕ್ಷೇಪಣಿ ಸಲ್ಲಿಸಲಾಗುವುದು, ಈಗಲಾದರು ಸೂಕ್ತ ಮೀಸಲಾತಿ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಬಸವರಾಜತಾತ, ಮ-ರಿಗೌಡ ಮಾ.ಪಾ.ಶಿವರಾಜ ಪಾಟೀಲ್, ಅಮರಪ್ಪಗೌಡ,ಈಶಣ್ಣ ಸಾಹುಕಾರ,ಈಶ ಪ್ಪಗೌಡ,ಶೇಖರಯ್ಯಸ್ವಾಮಿ,ಸುರೇಶಸ್ವಾಮಿ, ಮಹಾಂತೇಶ ಮರಾಠ, ವಿರುಪಾಕ್ಷಿ ಎಚ್ ಕೆ, ಚನ್ನಬಸವ,ನಾಗರಾಜ,ಬಸವರಾಜ ,ಆದಪ್ಪ, ಬಸವರಾಜ ಇದ್ದರು.

ನೂರುದ್ದೀನ್, ಸುಪ್ರಿಯಾ ಶಿವಶಂಕರ ಅವರಿಗೆ 'ಗುರು ಶ್ರೇಷ್ಠ' ಪ್ರಶಸ್ತಿ ಪ್ರದಾನ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆ ಹಾಗೂ ಸಾಧನೆಯ ಮೂಲಕ ಗುರುತಿಸಿಕೊಂಡಿರುವ ನಗರದ ಪ್ರತಿಷ್ಠಿತ ಪಾಟೀಲ್ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಸುಪ್ರಿಯಾ ಶಿವಶಂಕರ ಹಾಗೂ ನೂರುದ್ದೀನ್ ಅವರಿಗೆ ತಾಲೂಕು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಗುರು ಶ್ರೇಷ್ಠ' ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರು ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ, ಅವರ ಸಾಧನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ನೀಡಲಾಗುವ ಈ ಪ್ರಶಸ್ತಿಗೆ ಭಾಜನರಾದ ಸುಪ್ರಿಯಾ ಶಿವಶಂಕರ ಹಾಗೂ ನೂರುದ್ದೀನ್ ಅವರನ್ನು ಪಾಟೀಲ್ ಶಿಕ್ಷಣ ಸಂಸ್ಥೆಯ ವತಿಯಿಂದಲೂ ಆತ್ಮೀಯವಾಗಿ ಸನ್ಮಾನಿಸಲಾಯಿತು.



ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ ಕಾರ್ಯಕ್ರಮವು ಸಂತಸದ ವಾತಾವರಣದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಸಿ. ಪಾಟೀಲ್ ಅವರು, ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವಿದ್ಯಾರ್ಥಿಗಳಿಗೆ ಕೇವಲ ಪಠ್ಯಜ್ಞಾನವನ್ನು ನೀಡುವುದಷ್ಟೇ ಅಲ್ಲದೆ, ಅವರಲ್ಲಿ ಶಿಸ್ತು, ಸಂಸ್ಕಾರ, ಆತ್ಮವಿಶ್ವಾಸ ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸುವ ಜವಾಬ್ದಾ-ರಿಯೂ ಶಿಕ್ಷಕರ ಮೇಲಿದೆ. ಶಿಕ್ಷಕರ ಪರಿಶ್ರಮ ಮತ್ತು ಸಮರ್ಪಣಾ ಮನೋಭಾವವೇ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಉಪನ್ಯಾಸಕರನ್ನು ಗುರುತಿಸಿ ಗೌರವಿಸುವುದು ಇತರ ಶಿಕ್ಷಕರಿಗೂ ಪ್ರೇರಣೆ ನೀಡುತ್ತದೆ. ಇಂತಹ ಪ್ರಶಸ್ತಿಗಳು ಶಿಕ್ಷಕರಲ್ಲಿ ಇನ್ನಷ್ಟು ಉತ್ಸಾಹ ಹಾಗೂ ಜವಾಬ್ದಾರಿಯನ್ನು ಹೆಚ್ಚಿಸುವುದರ ಜೊತೆಗೆ ಶಿಕ್ಷಣದ ಗುಣಮಟ್ಟ ಸುಧಾರಿಸಲು ಸಹಕಾ-ರಿಯಾಗುತ್ತವೆ ಎಂಬ ಆಶಯ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತರಾದ ಸುಪ್ರಿಯಾ ಶಿವಶಂಕರ ಹಾಗೂ ನೂರುದ್ದೀನ್ ಅವರನ್ನು ಪಾಟೀಲ್ ಶಿಕ್ಷಣ ಸಂಸ್ಥೆಯ ವತಿಯಿಂದ ಸನ್ಮಾನಿಸಿ, ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಇವರಿಗೆ ದೊರೆತಿರುವ ಈ ಗೌರವವು ಕಾಲೇಜಿನ ಶೈಕ್ಷಣಿಕ ವಲಯದಲ್ಲಿಯೂ ಸಂತಸ ಮೂಡಿಸಿದ್ದು, ಸಂಸ್ಥೆಯ ಹೆಮ್ಮೆಗೆ ಮತ್ತೊಂದು ಗರಿ ಸೇರ್ಪಡೆಯಾದಂತಾಗಿದೆ.

ಕಾರ್ಯಕ್ರಮದಲ್ಲಿ ಲಿಂಗಸುಗೂರು ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವೆಂಕಟ್ ನಾರಾಯಣ ಎಂ., ಪಾಟೀಲ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಭಾರತೀ ಕೃಷ್ಣ ನಕ್ಕಂಟಿ, ಉಪನ್ಯಾಸಕರಾದ ಮಲ್ಲಿಕಾರ್ಜುನ, ಸೂಗೂರಯ್ಯ ಸಾಲಿಮಠ, ಶಿವಲೀಲಾ, ರೋಷಿನಿ, ಸಂಧ್ಯಾರಾಣಿ, ಶಾಮ್ ಕುಮಾರ, ಶಿವನಗೌಡ, ಅಮರೇಶ ಹಾಗೂ ಮರಿಸ್ವಾಮಿ ಸೇರಿದಂತೆ ಕಾಲೇಜಿನ ಎನ್-ಎಸ್‌ಎಸ್ ವಿದ್ಯಾರ್ಥಿನಿಯರು ಉಪಸ್ಥಿತರಿದ್ದು, ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಸಲ್ಲಿಸಿದರು.

ಶಿಕ್ಷಕರ ಸೇವೆಯನ್ನು ಗುರುತಿಸಿ ಗೌರವಿಸುವ ಇಂತಹ ಕಾರ್ಯಕ್ರಮಗಳು ಶಿಕ್ಷಣ ಕ್ಷೇತ್ರದಲ್ಲಿ ಸಕಾರಾತ್ಮಕ ಬದಲಾವಣೆಗೆ ಪ್ರೇರಣೆಯಾಗುವುದರ ಜೊತೆಗೆ, ಸಮಾಜದಲ್ಲಿ ಗುಣಮಟ್ಟದ ಶಿಕ್ಷಣದ ಮಹತ್ವವನ್ನು ಸಾರುತ್ತವೆ.

ಸಾಹಿತ್ಯ ಸಿಂಚನ

ಬದುಕು ಕಲಿಸಿದ ಪಾಠ

ಬದುಕು ಕಲಿಸಿದ ಪಾಠಗಳು ಸಾವಿರ,ಪ್ರತಿ
ಹೆಜ್ಜೆಯಲ್ಲೂ ಅನುಭವದ ಸಾರ.
ನಗುವಿನ ಹಿಂದೆ ನೋವು ಅಡಗಿರಬಹುದು,
ಮೌನದ ಹಿಂದೆ ಸಾವಿರ ಮಾತಿರಬಹುದು.

ಕೈಹಿಡಿದವರು ಕೆಲವೊಮ್ಮೆ ದೂರವಾದರು,
ನಂಬಿದ ಕನಸುಗಳು ಕಣ್ಣೀರಾದವು.
ಆದರೂ ಬದುಕು ನಿಲ್ಲದೆ ಸಾಗಿತು,
ಹೊಸ ದಾರಿಯ ಹುಡುಕಾಟ ಕಲಿಸಿತು.

ಸೋಲು ಬಂದು ಬಾಗಿಲು ತಟ್ಟಿದಾಗ,
ಗೆಲುವಿನ ಕನಸು ಮನದಲ್ಲಿ ಮೂಡಿತು.
ಕಣ್ಣೀರು ಬಂದು ಕಣ್ಣು ತುಂಬಿದಾಗ,
ಧೈರ್ಯದ ಬೆಳಕು ಹೃದಯದಲ್ಲಿ ಹೊಳೆಯಿತು.

ಎಲ್ಲರೂ ನಮ್ಮವರಲ್ಲ ಎಂಬ ಪಾಠ ಕಲಿಸಿತು,
ನಮ್ಮ ನೋವಿಗೆ ನಾವೇ ಔಷಧಿ ಎಂದಿತು.
ಕಾಲದ ಮುಂದೆ ಅಹಂಕಾರ ಸೋಲುತ್ತದೆ,
ಸಹನೆಯ ಮುಂದೆ ಕಷ್ಟವೂ ಬಾಗುತ್ತದೆ.

ಬದುಕು ಒಂದು ಪುಸ್ತಕ, ಅನುಭವ ಅದರ ಸಾಲು,
ಪ್ರತಿ ದಿನವೂ ಕಲಿಸುತ್ತದೆ ಹೊಸ ಪಾಠವನ್ನು.
ಕಷ್ಟಗಳ ನಡುವೆ ನಗುವುದನ್ನು ಕಲಿತೆ,
ಬಿದ್ದರೂ ಮತ್ತೆ ಏಳುವುದನ್ನು ಕಲಿತೆ.

ನಿನ್ನೆಗಿನ ನೋವು ಇಂದು ಪಾಠವಾಯಿತು,
ಇಂದಿನ ಹೋರಾಟ ನಾಳೆಯ ಶಕ್ತಿಯಾಯಿತು.
ಬದುಕು ಕಲಿಸಿದ ಪಾಠವೊಂದೇ ಸತ್ಯ,
ಧೈರ್ಯದಿಂದ ನಡೆದರೆ ಬದುಕು ಸುಂದರ ನಿತ್ಯ!

ಅ.20ರವರೆಗೆ ಎಚ್‌ಎಲ್‌ಸಿ ನಾಲೆಗೆ ನೀರು: ರೈತರು ಆತಂಕಪಡಬೇಡಿ ಎಂದ ಶಾಸಕ ಜೆ.ಎನ್.ಗಣೇಶ್

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ರೈತರ ಬೆಳೆಗಳಿಗೆ ಸಮರ್ಪಕವಾಗಿ ನೀರೊದಗಿಸುವ ನಿಟ್ಟಿನಲ್ಲಿ ನೀರಾವರಿ ಸಚಿವರೊಂದಿಗೆ ಚರ್ಚಿಸಲಾಗಿದ್ದು, ಅಕ್ಟೋಬರ್ 20ರ ತನಕ ಎಚ್‌ಎಲ್‌ಸಿ (HLC) ಕಾಲುವೆಗೆ ನೀರು ಹರಿಯಲಿದೆ. ಆದ್ದರಿಂದ ರೈತರು ಯಾವುದೇ ಕಾರಣಕ್ಕೂ ಆತಂಕಪಡುವ ಅಗತ್ಯವಿಲ್ಲ ಎಂದು ಶಾಸಕ ಜೆ.ಎನ್.ಗಣೇಶ್ ಭರವಸೆ ನೀಡಿದ್ದಾರೆ.



ಎಚ್‌ಎಲ್‌ಸಿ ಭಾಗಕ್ಕೆ ನೀರು ಕಡಿತಗೊಳಿಸಲಾಗಿದೆ ಎಂದು ಅಂತರ್ಜಾಲದಲ್ಲಿ ಹರಿದಾಡುತ್ತಿರುವ ವಿಡಿಯೋ ಕುರಿತು ಪ್ರತಿಕ್ರಿಯಿಸಿದ ಅವರು, "ರೈತರು ಇಂತಹ ವದಂತಿಗಳಿಗೆ ಕಿವಿಗೊಟ್ಟು ಆತಂಕಕ್ಕೊಳಗಾಗಬಾರದು. ರೈತರ ಪರವಾಗಿ ಶಕ್ತಿಮೀರಿ ಕೆಲಸ ಮಾಡಲು ನಾವು ಬದ್ಧರಾಗಿದ್ದೇವೆ" ಎಂದರು. ಮೆಣಸಿನಕಾಯಿ ಬೆಳೆಯನ್ನು ಉಳಿಸಿಕೊಳ್ಳಲು ಡಿಸೆಂಬರ್ 15ರವರೆಗೆ ನೀರು ಬಿಡುವಂತೆ ರೈತರು ಮನವಿ ಮಾಡಿದ್ದಾರೆ. ಜಲಾಶಯದಲ್ಲಿ ನೀರಿನ ಲಭ್ಯತೆ ಇರುವವರೆಗೂ ರೈತರಿಗೆ ನೀರು ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಅಕ್ಟೋಬರ್ 20ರ ನಂತರ ಉನ್ನತ ಮಟ್ಟದ ಸಭೆ ನಡೆಸಿ, ಮುಂದಿನ ದಿನಗಳಲ್ಲಿ ನೀರು ಬಿಡುವ ಕುರಿತು ಸೂಕ್ತ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಶಾಸಕರು ಸ್ಪಷ್ಟಪಡಿಸಿದರು. ರೈತರು ಸಹಕರಿಸಿದರೆ ಪ್ರತಿ ಹಂತದಲ್ಲೂ ಅವರ ಜೊತೆಗಿದ್ದು ಸಮರ್ಪಕವಾಗಿ ನೀರು ಹರಿಸಲಾಗುವುದು ಎಂದು ಅವರು ಹೇಳಿದರು.

ರೈಲ್ವೆ ಯೋಜನೆಗೆ ಅನುದಾನ, ನೂತನ ಸೇತುವೆ ನಿರ್ಮಾಣಕ್ಕೆ ಆಗ್ರಹಿಸಿ ತಹಸೀಲ್ದಾರರಿಗೆ ಬಿಜೆಪಿ ಮನವಿ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲ್ಲೂಕಿನ ಪ್ರಮುಖ ಎರಡು ದಶಕಗಳ ಬೇಡಿಕೆಗಳಾದ ದರೋಜಿ–ಗಂಗಾವತಿ ರೈಲ್ವೆ ಯೋಜನೆಗೆ ಅನುದಾನ ಬಿಡುಗಡೆ ಹಾಗೂ ತುಂಗಭದ್ರಾ ನದಿಗೆ ನೂತನ ಸೇತುವೆ ನಿರ್ಮಾಣ ಕಾಮಗಾರಿಯನ್ನು ತಕ್ಷಣವೇ ಆರಂಭಿಸಬೇಕೆಂದು ಒತ್ತಾಯಿಸಿ, ಬಿಜೆಪಿ ಎಸ್.ಸಿ. ಮೋರ್ಚಾ ತಾಲೂಕು ಮಂಡಲ ಅಧ್ಯಕ್ಷರಾದ ಸಿ.ಎ. ಚನ್ನಪ್ಪ ಅವರ ನೇತೃತ್ವದಲ್ಲಿ ಕಂಪ್ಲಿ ತಹಸೀಲ್ದಾರರ ಮೂಲಕ ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಬುಧವಾರ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ಸಿ.ಎ. ಚನ್ನಪ್ಪ ಅವರು, "ಕಂಪ್ಲಿ ಮೂಲಕ ಹಾದುಹೋಗುವ 35 ಕಿ.ಮೀ ಅಂತರದ ದರೋಜಿ–ಗಂಗಾವತಿ ನೂತನ ಬ್ರಾಡಗೇಜ್



ರೈಲ್ವೆ ಯೋಜನೆಗೆ ರೈಲ್ವೆ ಮಂಡಳಿಯು ಈಗಾಗಲೇ ಕಾರ್ಯಸಾಧ್ಯತಾ ವರದಿಯನ್ನು ಪರಿಶೀಲಿಸಿ, ?705.45 ಕೋಟಿ ರೂಪಾಯಿ ವೆಚ್ಚದ ಯೋಜನಾ ಮೊತ್ತವನ್ನು ನಿಗದಿಪಡಿಸಿದೆ. ಈ ಯೋಜನೆಯಿಂದ ಹೊಸಪೇಟೆ, ಜಿಂದಾಲ್, ಬಳ್ಳಾರಿ, ಹೈದರಾಬಾದ್, ಕೊಪ್ಪಳ ಹಾಗೂ ಸಿಂಧನೂರು ಭಾಗದ ಪ್ರಯಾಣಿಕರಿಗೆ ಮತ್ತು ಸರಕು ಸಾಗಣೆಗೆ ಭಾರಿ ಅನುಕೂಲವಾಗಲಿದೆ. ಕೇಂದ್ರ ಸರ್ಕಾರವು ಸಚಿವ ಸಂಪುಟದಲ್ಲಿ ಇದಕ್ಕೆ ಶೀಘ್ರವಾಗಿ ಒಪ್ಪಿಗೆ ನೀಡಿ ಕಾಮಗಾರಿ ಆರಂಭಿಸಬೇಕು" ಎಂದು ಒತ್ತಾಯಿಸಿದರು.

ಇದೇ ವೇಳೆ ಕಂಪ್ಲಿ ತುಂಗಭದ್ರಾ ನದಿಯ ಹಳೆಯ ಸೇತುವೆಯ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, "ಪ್ರಸ್ತುತ ಇರುವ ಸೇತುವೆಯು ಆರು ದಶಕಗಳಷ್ಟು ಹಳೆಯದಾಗಿದ್ದು, ಸಂಪೂರ್ಣ ಶಿಥಿಲಗೊಂಡಿದೆ. ನೂತನ ಸೇತುವೆ ನಿರ್ಮಾಣಕ್ಕಾಗಿ ಜಮೀನು ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ ಎನ್ನಲಾಗುತ್ತಿದ್ದು, ಸರ್ಕಾರ ತಕ್ಷಣವೇ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಬೇಕು" ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಅಗಳಿ ಪಂಪಾಪತಿ, ರಾಜಶೇಖರ, ಸಿಎಂ ಬಸವರಾಜ, ಕೆ. ರಂಗಪ್ಪ, ರಾಜಶೇಖರ ಟಿ., ಡಿ. ರಮೇಶ್, ವಿ. ಲಿಂಗರಾಜ್ ಯಾದವ್, ವೈ. ಮುರಳಿ ಮೋಹನ್ ರೆಡ್ಡಿ, ಬಿ. ನಾಗರಾಜ, ಆಕಾಶ್, ಎಂ. ವಿರುಪಾಕ್ಷಿ, ಬಿ. ಮಂಜುನಾಥ ಬಾರಿಕಾರ್, ನಾಗರಾಜ್ ಉಪಸ್ಥಿತರಿದ್ದರು.

ಕುಷ್ಟಗಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮನ ವೀರಜ್ಯೋತಿಗೆ ಅದ್ಧೂರಿ ಸ್ವಾಗತ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕಿತ್ತೂರು ಉತ್ಸವ–2026ರ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಕಿತ್ತೂರು ರಾಣಿ ಚನ್ನಮ್ಮನ ವೀರಜ್ಯೋತಿ ಯಾತ್ರೆಗೆ ಕುಷ್ಟಗಿ ಪಟ್ಟಣದಲ್ಲಿ ಬುಧವಾರ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಅದ್ಧೂರಿ ಸ್ವಾಗತ ಕೋರಿದರು.

ಬೆಳಗಾವಿ ಜಿಲ್ಲೆಯ ಐತಿಹಾಸಿಕ ಕಿತ್ತೂರಿನಲ್ಲಿ ಅಕ್ಟೋಬರ್ 23ರಿಂದ 25ರವರೆಗೆ ನಡೆಯಲಿರುವ ಕಿತ್ತೂರು ಉತ್ಸವದ ಅಂಗವಾಗಿ ಈ ವೀರಜ್ಯೋತಿ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಪಟ್ಟಣಕ್ಕೆ ಆಗಮಿಸಿದ ರಾಣಿ ಚನ್ನಮ್ಮನ ಪುತ್ಥಳಿ ಹೊತ್ತ ವೀರಜ್ಯೋತಿ ರಥ–'ವನ್ನು ಪೂರ್ಣಕುಂಭ, ಪುಷ್ಪವೃಷ್ಟಿ ಹಾಗೂ ಜಯಘೋಷಗಳೊಂದಿಗೆ ಸ್ವಾಗತಿಸಿ, ಗೌರವಪೂರ್ವಕವಾಗಿ ಬೀಳ್ಕೊಡಲಾಯಿತು. ಯಾತ್ರೆಯ ನೇತೃತ್ವ ವಹಿಸಿದ್ದ ಬೈಲಹೊಂಗಲ ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಡಿದ ವೀರವನಿತೆ ಕಿತ್ತೂರು ರಾಣಿ ಚನ್ನಮ್ಮನ ತ್ಯಾಗ, ಶೌರ್ಯ ಮತ್ತು ಸಾಹಸದ ಇತಿಹಾಸವನ್ನು ಜನಸಾಮಾನ್ಯರಿಗೆ ಪರಿಚಯಿಸುವುದು ಹಾಗೂ ಕಿತ್ತೂರು ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸುವುದು ವೀರಜ್ಯೋತಿ ಯಾತ್ರೆಯ ಉದ್ದೇಶವಾಗಿದೆ ಎಂದರು.

ಅಕ್ಟೋಬರ್ 12ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವೀರಜ್ಯೋತಿ ಯಾತ್ರೆಗೆ ಚಾಲನೆ ನೀಡಿದ್ದು, ಬೆಂಗಳೂರಿನಿಂದ ಕಿತ್ತೂರಿನವರೆಗೆ ಯಾತ್ರೆ ಸಂಚರಿಸಲಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ದೇವೇಂದ್ರಪ್ಪ ಬಳೂಟಗಿ, ಶರಣಪ್ಪ ಪ್ರಧಾನ, ಈರಣ್ಣ ಬಳಿಗಾರ, ಸಿದ್ದರಾಮಪ್ಪ ಕೌದಿ, ವೀರೇಶ ತುರಕಾಣಿ, ಉಮೇಶ ಮಂಗಳೂರು, ಬಸವರಾಜ ಕಾಮನೂರ, ಅಮರೇಗೌಡ ನಾಗೂರ, ಸುರೇಶ ಕೌದಿ, ಬಸವರಾಜ ಹೊರಪೇಟಿ, ಶಿವು ಸೂಡಿ, ಚಂದ್ರ ಬಾವಿಕಟ್ಟಿ, ಮರಸಣ್ಣ ತಾಳದ, ಶಿವಪ್ಪ ಗೆದ್ದಲಗಟ್ಟಿ, ಬಸವರಾಜ ಬುಡಕುಂಟಿ ಸೇರಿದಂತೆ ವಿವಿಧ ಸಮಾಜಗಳ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಭೋಯಿ–ಬೆಸ್ತರಿಗೆ ಎಸ್‌ಸಿ ಪ್ರಮಾಣಪತ್ರ ನೀಡದಂತೆ ಆಗ್ರಹ
ಭೋವಿ (ವಡ್ಡರ್) ಸಮಾಜದಿಂದ ಧರಣಿ ತಹಶೀಲ್ದಾರ್‌ಗೆ ಮನವಿ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಭೋಯಿ?ಬೆಸ್ತ ಸಮುದಾಯದವರು ಪರಿಶಿಷ್ಟ ಜಾತಿಗೆ (ಎಸ್‌ಸಿ) ಸೇರದಿದ್ದಲ್ಲಿ ಅವರಿಗೆ ಎಸ್‌ಸಿ ಜಾತಿ ಪ್ರಮಾಣಪತ್ರ ನೀಡಬಾರದು ಎಂದು ಆಗ್ರಹಿಸಿ, ಕುಷ್ಟಗಿ ತಾಲೂಕು ಭೋವಿ (ವಡ್ಡರ್) ಸಮಾಜದ ವತಿಯಿಂದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಧರಣಿ ನಡೆಸಿ ಮನವಿ ಸಲ್ಲಿಸಲಾಯಿತು.

ಭೋವಿ ಸಮಾಜದ ಕೊಪ್ಪಳ ಜಿಲ್ಲಾ ಅಧ್ಯಕ್ಷ ಪರಸಪ್ಪ ಅಮರಾವತಿ ಅವರ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ, ಭೋಯಿ?ಬೆಸ್ತ ಸಮುದಾಯಕ್ಕೆ ಎಸ್‌ಸಿ ಜಾತಿ ಪ್ರಮಾಣಪತ್ರ ನೀಡುವ ಕುರಿತು ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ



ಸೂಚಪ್ಪ ದೇವರಮನಿ, ಗೋವಿಂದ್ ವಡ್ಡರ್, ಮಾರೇಗೌಡ, ಹನುಮಸಾಗರ್, ತಿಮ್ಮಣ್ಣ ಹನುಮಸಾಗರ್, ಬಸಪ್ಪ ಹನುಮಸಾಗರ್, ತಿಮ್ಮಣ್ಣ ಹಿರೇಮನಿ, ಹನುಮಂತಪ್ಪ ಗಡಾದ್, ನಾಗರಾಜ್ ಆಂಜನೇಯ, ಪುರಸಭೆಯ ನಾಮನಿರ್ದೇಶಿತ ಸದಸ್ಯ ಹನುಮೇಶ ಭೋವಿ, ನಾಗರಾಜ್ ಭೋವಿ, ಪರಶುರಾಮ್, ಕೃಷ್ಣಪ್ಪ ಬಿಜಿಕಲ್, ಯಮನೂರಪ್ಪ ಬಿಜಿಕಲ್, ಶರಣಪ್ಪ ಬಿಜಿಕಲ್, ಪ್ರಕಾಶ್ ಗಡಾದ್, ದುರ್ಗಪ್ಪ ವಡ್ಡರ್, ರಾಜು ದೊಡ್ಡಮನಿ, ಯಮನೂರಪ್ಪ, ಈಶಪ್ಪ ಭೋವಿ, ರಾಮಣ್ಣ ಯಲ್ಲಬುರ್ತಿ, ರಮೇಶ್ ಯಲ್ಲಬುರ್ತಿ, ಶಂಕ್ರಪ್ಪ ವಡ್ಡರ್, ಚಂದ್ರಶೇಖರ್ ವಡ್ಡರ್, ಯಮನಪ್ಪ ಕಳ್ಳಿಕಟ್ಟಿಗಿ, ಮುತ್ತಣ್ಣ ಮ್ಯಾಗೇರಿ ಹಾಗೂ ಮಾಜಿ ಸೈನಿಕ ಭೀಮಣ್ಣ ಮ್ಯಾಗೇರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಇದಲ್ಲದೆ, ದಾಸಪ್ಪ ಪೂಜಾರಿ, ಹನುಮಂತಪ್ಪ ಯರದಾಳ್, ವೆಂಕಟೇಶ್ ಇಂಗಳಗಿ, ಚಿನ್ನಪ್ಪ ನಾಗರಾಳ, ವೀರಣ್ಣ ಹಿರೇಮನಿ, ಹನುಮಂತಪ್ಪ ಹಿರೇಮನಿ, ಯಲ್ಲಪ್ಪ ಭೋವಿ, ಯಮನೂರಪ್ಪ ಭೋವಿ, ಮುತ್ತಣ್ಣ ಹಂಚಿನಾಳ, ಶಿವಕುಮಾರ್ ಭೋವಿ, ಹುಲ್ಲಪ್ಪ ವಡ್ಡರ್, ಮಾರುತಿ ಕೊಪ್ಪದ್, ಈರಣ್ಣ ವಡ್ಡರ್, ಮುತ್ತು ವಡ್ಡರ್ ಸೇರಿದಂತೆ ಟೆಂಗುಂಟಿ, ಹಂಚಿನಾಳ, ಹಿರೇಮನ್ನಾಪುರ, ಚಳಗೇರಿ, ದೋಟಿಹಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಮಾಜದ ಹಿರಿಯರು, ಮುಖಂಡರು ಮತ್ತು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಧರಣಿಯ ಬಳಿಕ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ, ಸಮಾಜದ ಬೇಡಿಕೆಗೆ ಸ್ಪಂದಿಸುವಂತೆ ಒತ್ತಾಯಿಸಲಾಯಿತು.

ಮಹಿಳೆಯರ ಬದುಕಿನ ಚಿತ್ರಣವೇ ಜಾನಪದ ಸಾಹಿತ್ಯದ ಮೂಲ ಆಶಯ: ಜಾನಪದ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ವಿನೂತನ ಆಯಾಮ ನೀಡಿದೆ –ಪ್ರೊ. ವಿ.ಬಿ.ತಾರಕೇಶ್ವರ

ನೈಜ್ಯ ದೆಸೆ ನ್ಯೂಸ್

ಹೈದರಾಬಾದ್: ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದುಬಂದಿರುವ ಸಾಹಿತ್ಯ ಮತ್ತು ಜನಪದ ಪರಂಪರೆಗಳು ವೇಗವಾಗಿ ಮರೆಯಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿ, ದಾಖಲಿಸಿ ಮುಂದಿನ ತಲೆಮಾರುಗಳಿಗೆ ಪರಿಚಯಿಸುವ ಕಾರ್ಯಕ್ಕೆ ಆದ್ಯತೆ ನೀಡಬೇಕು ಎಂದು ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಆರ್ಟ್ಸ್ ಕಾಲೇಜಿನ ಡೀನ್ ಪ್ರೊ. ಲಿಂಗಪ್ಪ ಗೊನಾಳ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ, ಹಲಸಂಗಿ ಗೆಳೆಯರ ಬಳಗ, ವಿಜಯಪುರ ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಹಾಗೂ ಬಹುಭಾಷಾ ಕವಿಗೋಷ್ಠಿಯ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೌಖಿಕ ಸಾಹಿತ್ಯವು ಜನಸಾಮಾನ್ಯರ ಬದುಕು, ಸಂಸ್ಕೃತಿ, ಸಂಪ್ರದಾಯ, ನಂಬಿಕೆ ಮತ್ತು ಜೀವನಾನುಭವಗಳನ್ನು ಒಳಗೊಂಡಿರುವ ಅಮೂಲ್ಯ ಸಾಂಸ್ಕೃತಿಕ ಸಂಪತ್ತಾಗಿದೆ. ಜನಪದ ಹಾಡುಗಳು, ಕಥೆಗಳು, ಗಾದೆಗಳು, ಒಗಟುಗಳು ಹಾಗೂ ಆಚರಣೆಗಳ ಮೂಲಕ ಒಂದು ಸಮುದಾಯದ ಇತಿಹಾಸ ಮತ್ತು ಜೀವನಮೌಲ್ಯಗಳು ಅಭಿವ್ಯಕ್ತಿಗೊಳ್ಳುತ್ತವೆ.

ಇಂತಹ ಸಾಹಿತ್ಯವನ್ನು ಕಾಲಮಿತಿಯೊಳಗೆ ಸಂಗ್ರಹಿಸಿ ಸಂರಕ್ಷಿಸದಿದ್ದರೆ ಮುಂದಿನ ಪೀಳಿಗೆಗೆ ಈ ಅಮೂಲ್ಯ ಪರಂಪರೆಯನ್ನು ಪರಿಚಯಿಸುವುದು ಕಷ್ಟವಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದರು. ಆಧುನಿಕ ಜೀವನಶೈಲಿ, ತಂತ್ರಜ್ಞಾನದ ಪ್ರಭಾವ ಮತ್ತು ತಲೆಮಾರುಗಳ ನಡುವಿನ ಅಂತರದಿಂದಾಗಿ ಮೌಖಿಕ ಸಾಹಿತ್ಯದ ಪ್ರಸಾರಕ್ಕೆ ಸವಾಲುಗಳು ಎದುರಾಗುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಹಿರಿಯರ ನೆನಪಿನಲ್ಲಿ ಉಳಿದಿರುವ ಜನಪದ ಹಾಡುಗಳು, ಕಥೆಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ದಾಖಲಿಸುವ ಕಾರ್ಯವನ್ನು ಸಂಶೋಧಕರು, ಸಾಹಿತಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳು ಕೈಗೆತ್ತಿಕೊಳ್ಳಬೇಕು ಎಂದು ಕರೆ ನೀಡಿದರು. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯಲ್ಲಿ ಮೌಖಿಕ ಪರಂಪರೆಯ ಕೊಡುಗೆ ಮಹತ್ವದ್ದಾಗಿದೆ. ಲಿಖಿತ ಸಾಹಿತ್ಯದಷ್ಟೇ ಮೌಖಿಕ ಸಾಹಿತ್ಯಕ್ಕೂ ಪ್ರಾಮುಖ್ಯತೆ ನೀಡಬೇಕು. ಜನಪದ ಸಾಹಿತ್ಯದ ಅಧ್ಯಯನವು ಸಮಾಜದ ಸಾಂಸ್ಕೃತಿಕ ಬೇರುಗಳನ್ನು ಅರಿಯಲು ನೆರವಾಗುವುದರ ಜೊತೆಗೆ ಭಾಷೆಯ ವೈವಿಧ್ಯತೆ ಮತ್ತು ಜನಜೀವನದ ವೈಶಿಷ್ಟ್ಯಗಳನ್ನು ಪರಿಚಯಿಸುತ್ತದೆ ಎಂದು ಪ್ರೊ. ಗೊನಾಳ ಅಭಿಪ್ರಾಯಪಟ್ಟರು.

ಮಹಿಳೆಯರ ಜೀವನಾನುಭವ, ನೋವು–ನಲಿವು, ಸಾಮಾಜಿಕ ಸ್ಥಿತಿಗತಿ ಹಾಗೂ ಸಾಂಸ್ಕೃತಿಕ ಬದುಕನ್ನು ಪರಿಚಯಿಸುವುದು ಜಾನಪದ ಸಾಹಿತ್ಯದ ಪ್ರಮುಖ ಆಶಯವಾಗಿದೆ ಎಂದು ಪ್ರೊ. ವಿ.ಬಿ.ತಾರಕೇಶ್ವರ ಅಭಿಪ್ರಾಯಪಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ, ಹಲಸಂಗಿ ಗೆಳೆಯರ ಬಳಗ, ವಿಜಯಪುರ ಹಾಗೂ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಹಾಗೂ ಬಹುಭಾಷಾ ಕವಿಗೋಷ್ಠಿಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು. ಜಾನಪದ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ವಿನೂತನ ಆಯಾಮವನ್ನು ಒದಗಿಸಿದೆ. ಜನಸಾಮಾನ್ಯರ ಬದುಕು, ಸಂಪ್ರದಾಯ, ಆಚರಣೆ, ನಂಬಿಕೆ ಮತ್ತು ಅನುಭವಗಳನ್ನು ಒಳಗೊಂಡಿರುವ ಜಾನಪದ ಸಾಹಿತ್ಯವು ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ತಲೆಮಾರುಗಳಿಗೆ ಪರಿಚಯಿಸುವ ಮಹತ್ವದ ಮಾಧ್ಯಮವಾಗಿದೆ ಎಂದು ಹೇಳಿದರು. ವಿಶೇಷವಾಗಿ ಮಹಿಳೆಯರ ಬದುಕಿನ ವಿವಿಧ ಮಜಲುಗಳನ್ನು ಜಾನಪದ ಹಾಡುಗಳು, ಲಾವಣಿಗಳು, ಗಾದೆಗಳು, ಕಥೆಗಳು ಮತ್ತು ಸಂಪ್ರದಾಯಗಳು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತವೆ. ಕುಟುಂಬದ ಜವಾಬ್ದಾರಿಗಳು, ಸಾಮಾಜಿಕ ನಿರ್ಬಂಧಗಳು, ಭಾವನಾತ್ಮಕ ಅನುಭವಗಳು ಹಾಗೂ ಮಹಿಳೆಯರ ಅಂತರಂಗದ ಅಭಿವ್ಯಕ್ತಿಗಳಿಗೆ ಜಾನಪದ ಸಾಹಿತ್ಯದಲ್ಲಿ ಪ್ರಮುಖ ಸ್ಥಾನವಿದೆ. ಹೀಗಾಗಿ ಮಹಿಳೆಯರ ಜೀವನವನ್ನು ಅರ್ಥಮಾಡಿಕೊಳ್ಳಲು ಜಾನಪದ ಸಾಹಿತ್ಯವು ಮಹತ್ವದ ಆಕರವಾಗಿದೆ ಎಂದು ವಿವರಿಸಿದರು. ಭಾರತೀಯತೆ ಮತ್ತು ರಾಷ್ಟ್ರೀಯ ಅಸ್ಮಿತೆಯ ಪ್ರತೀಕ ಜಾನಪದ



ಜಾನಪದ ಸಾಹಿತ್ಯವು ಕೇವಲ ಸಾಹಿತ್ಯಿಕ ಅಭಿವ್ಯಕ್ತಿಗೆ ಸೀಮಿತವಾಗಿಲ್ಲ. ಭಾರತೀಯತೆಯ ಸಾಂಸ್ಕೃತಿಕ ನೆಲೆಗಳನ್ನು ಹಾಗೂ ರಾಷ್ಟ್ರೀಯ ಅಸ್ಮಿತೆಯನ್ನು ಉಳಿಸಿ ಬೆಳೆಸುವಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ. ವಿವಿಧ ಪ್ರದೇಶಗಳ ಜನಜೀವನ, ಭಾಷೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಪ್ರತಿಬಿಂಬಿಸುವ ಜಾನಪದ ಅಭಿವ್ಯಕ್ತಿಗಳು ದೇಶದ ವೈವಿಧ್ಯತೆಯ ನಡುವಿನ ಏಕತೆಯನ್ನು ಪರಿಚಯಿಸುತ್ತವೆ ಎಂದು ಪ್ರೊ. ತಾರಕೇಶ್ವರ ಹೇಳಿದರು. ಜಾಗತೀಕರಣದ ಪ್ರಭಾವದಿಂದ ಸಾಂಪ್ರದಾಯಿಕ ಜೀವನಶೈಲಿ ಮತ್ತು ಮೌಖಿಕ ಪರಂಪರೆಗಳು ಬದಲಾಗುತ್ತಿರುವ ಸಂದರ್ಭದಲ್ಲಿ ಜಾನಪದ ಸಂಪತ್ತನ್ನು ದಾಖಲಿಸುವುದು, ಸಂರಕ್ಷಿಸುವುದು ಮತ್ತು ಯುವಪೀಳಿಗೆಗೆ ಪರಿಚಯಿಸುವುದು ಅಗತ್ಯವಾಗಿದೆ. ಜಾನಪದ ಸಾಹಿತ್ಯದ ಅಧ್ಯಯನವು ಸಮಾಜದ ಇತಿಹಾಸ, ಸಾಂಸ್ಕೃತಿಕ ಬೆಳವಣಿಗೆ ಮತ್ತು ಜನರ ಜೀವನಮೌಲ್ಯಗಳನ್ನು ಅರಿಯಲು ನೆರವಾಗುತ್ತದೆ ಎಂದರು.

ಹಲಸಂಗಿ ಗೆಳೆಯರ ಬಳಗದ ಕೊಡುಗೆ ಅಪಾರ : ಕನ್ನಡ ಜಾನಪದ ಸಾಹಿತ್ಯದ ಬೆಳವಣಿಗೆಗೆ ಹಲಸಂಗಿ ಗೆಳೆಯರ ಬಳಗ ನೀಡಿರುವ ಕೊಡುಗೆ ಅಪಾರವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಜಾನಪದ ಸಾಹಿತ್ಯ ಮತ್ತು ಜನಪದ ಪರಂಪರೆಯ ಮಹತ್ವವನ್ನು ಗುರುತಿಸಿ ಅವುಗಳ ಸಂಗ್ರಹ, ಅಧ್ಯಯನ ಹಾಗೂ ಪ್ರಸಾರಕ್ಕೆ ಶ್ರಮಿಸಿದ ಸಾಹಿತ್ಯಿಕ ಪ್ರಯತ್ನಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ ಎಂದು ಹೇಳಿದರು. ಜಾನಪದ ಸಾಹಿತ್ಯವನ್ನು ಉಳಿಸುವುದು ಎಂದರೆ ಕೇವಲ ಹಳೆಯ ಹಾಡುಗಳು ಮತ್ತು ಕಥೆಗಳನ್ನು ಸಂರಕ್ಷಿಸುವುದಲ್ಲ; ಅವುಗಳ ಹಿಂದಿರುವ ಜನಜೀವನ, ಸಾಮಾಜಿಕ ಅನುಭವಗಳು, ಭಾಷಾ ಸೊಗಡು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಮುಂದಿನ ತಲೆಮಾರುಗಳಿಗೆ ತಲುಪಿಸುವುದಾಗಿದೆ. ಈ ನಿಟ್ಟಿನಲ್ಲಿ ಸಾಹಿತ್ಯ ಸಂಘಟನೆಗಳು, ಸಂಶೋಧಕರು ಮತ್ತು ಯುವ ಬರಹಗಾರರು ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಅವರು ಕರೆ ನೀಡಿದರು.

ಕವಿತೆಗೆ ಸೂಕ್ತ ಮನ್ನಣೆ ಸಿಗದಿರುವುದು ಕಳವಳಕಾರಿ: ವಾಸುದೇವ ನಾಡಿಗ್ ಹೈದರಾಬಾದ್: ಸಮಾಜದಲ್ಲಿ ಕವಿತೆ ಮತ್ತು ಕವಿಗಳಿಗೆ ದೊರೆಯಬೇಕಾದ ಮನ್ನಣೆ ಕಡಿಮೆಯಾಗುತ್ತಿರುವುದು ಕಳವಳಕಾರಿ ಸಂಗತಿ. ಸಾಹಿತ್ಯದ ಮೌಲ್ಯವನ್ನು ಅದರ ಮಾರಾಟದ ಪ್ರಮಾಣದಿಂದ ಅಳೆಯದೆ, ಅದರಲ್ಲಿರುವ ಜೀವನದರ್ಶನ, ಮಾನವೀಯ ಮೌಲ್ಯ ಹಾಗೂ ಸೃಜನಶೀಲತೆಯ ಆಧಾರದಲ್ಲಿ ಗುರುತಿಸಬೇಕು ಎಂದು ಹಿರಿಯ ಕವಿ ವಾಸುದೇವ ನಾಡಿಗ್ ಹೇಳಿದರು. ಕವಿತೆಗೂ ಕವಿಯ ವ್ಯಕ್ತಿತ್ವಕ್ಕೂ ವ್ಯತ್ಯಾಸವಿದೆ. ಹೊರಜಗತ್ತಿನಲ್ಲಿ ಗಂಭೀರತೆ ಹಾಗೂ ಆಡಂಬರದ ಮುಖವಾಡ ಧರಿಸುವ ವ್ಯಕ್ತಿ ಮನೆಯೊಳಗೆ ಏಕಾಂಗಿಯಾಗಿರಬಹುದು. ಇಂತಹ ಅಂತರಂಗದ ತಲ್ಲಣಗಳಿಗೆ ಅಭಿವ್ಯಕ್ತಿ ನೀಡುವ ಶಕ್ತಿ ಕವಿತೆಗಿದೆ.

ಬದುಕಿನ ಬೇಸರ, ನೋವು ಮತ್ತು ಸಂಕಷ್ಟಗಳನ್ನು ಮರೆತು ನಿರಾಳತೆಯನ್ನು ಕಂಡುಕೊಳ್ಳಲು ಕವಿತೆ ನೆರವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಕವಿತೆ ಕೇವಲ ಭಾವನೆಗಳ ಅಭಿವ್ಯಕ್ತಿಯಲ್ಲ; ಅದು ಬದುಕಿನ ಮೌಲ್ಯಗಳನ್ನು ಪರಿಚಯಿಸುವ ಹಾಗೂ ಮನುಷ್ಯನ ಆತ್ಮಸಾಕ್ಷಿಯನ್ನು ಜಾಗೃತಗೊಳಿಸುವ ಮಾಧ್ಯಮವಾಗಿದೆ. ಸಮಾಜದ ನೈಜ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುವ ಕವಿತೆಗಳು ಜನರ ಚಿಂತನೆಗೆ ಹೊಸ ದಿಕ್ಕು ನೀಡುತ್ತವೆ. ಕುವೆಂಪು ಅವರ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸೌಂದರ್ಯಪ್ರಜ್ಞೆ, ಪ್ರಕೃತಿಪ್ರೇಮ ಮತ್ತು ಜೀವನದರ್ಶನವನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು ಎಂದು ಹೇಳಿದರು. ಕವಿಗಳ ಕಡೆಗಣನೆ ಸಲ್ಲದು ಸಮಾಜದಲ್ಲಿ ನಿಜವಾದ ಕವಿಗಳು ಮತ್ತು ಸೃಜನಶೀಲ ಬರಹಗಾರರಿಗೆ ಸೂಕ್ತ ಮನ್ನಣೆ ದೊರೆಯಬೇಕು. ಪ್ರಚಾರ ಮತ್ತು ಪ್ರಭಾವಗಳಿಗೆ ಆದ್ಯತೆ ನೀಡುವ ಬದಲು ಸಾಹಿತ್ಯದ ಗುಣಮಟ್ಟಕ್ಕೆ ಮೌಲ್ಯ ನೀಡುವ ವಾತಾವರಣ ನಿರ್ಮಾಣವಾಗಬೇಕು. ಕವಿತೆ ಬರೆಯುವುದು ಕೇವಲ ಪದಗಳನ್ನು ಜೋಡಿಸುವುದಲ್ಲ; ಬದುಕಿನ ಅನುಭವ, ಸಾಮಾಜಿಕ ಕಾಳಜಿ ಮತ್ತು ಆತ್ಮಸಾಕ್ಷಿಯ ಅಭಿವ್ಯಕ್ತಿಯಾಗಿದೆ ಎಂದು ವಾಸುದೇವ ನಾಡಿಗ್ ಹೇಳಿದರು.

'ಧರಣಿ ತುಂಬಿದ ಮಧ್ಯದೊಳಗೆ' ಹಾಗೂ 'ಎದೆ ತುಂಬಿ ಹಾಡುವೆ' ಮೊದಲಾದ ಕವನಗಳನ್ನು ಓದುವುದರಿಂದ ಕಾವ್ಯದ ಸೌಂದರ್ಯ, ಭಾವನಾತ್ಮಕ ಆಳ ಮತ್ತು ಜೀವನಮೌಲ್ಯಗಳನ್ನು ಅರಿಯಬಹುದು ಎಂದು ಅವರು ಉಲ್ಲೇಖಿಸಿದರು. ಪ್ರಕಾಶನ ಕ್ಷೇತ್ರದ ವಾಣಿಜ್ಯ ಧೋರಣೆಗೆ ಆಕ್ಷೇಪ ಪ್ರಕಾಶನ ಕ್ಷೇತ್ರದಲ್ಲಿ ಮಾರಾಟಕ್ಕೆ ಹೆಚ್ಚಿನ ಆದ್ಯತೆ ದೊರೆಯುತ್ತಿರುವುದರಿಂದ ಉತ್ತಮ ಸಾಹಿತ್ಯಕ್ಕೆ ಸೂಕ್ತ ಅವಕಾಶ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದರು. ಪುಸ್ತಕಗಳ ಮಾರಾಟದ ಲೆಕ್ಕಾಚಾರಕ್ಕಿಂತ ಕೃತಿಯ ಸಾಹಿತ್ಯಿಕ ಮೌಲ್ಯಕ್ಕೆ ಆದ್ಯತೆ ನೀಡಬೇಕು. ಪ್ರಕಾಶಕರು ಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಸಾಹಿತ್ಯದ ಬೆಳವಣಿಗೆಗೆ ನೆರವಾಗಬೇಕು ಎಂದರು. ಕನ್ನಡ ಕವಿತೆಗಳು ಕರ್ನಾಟಕದ ಗಡಿಗಳನ್ನು ದಾಟಿ ಇತರ ರಾಜ್ಯಗಳಲ್ಲಿಯೂ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಬಹುಭಾಷಾ ಕವಿಗೋಷ್ಠಿಗಳು ವಿವಿಧ ಭಾಷೆಗಳ ಸಾಹಿತ್ಯಿಕ ಅಭಿವ್ಯಕ್ತಿಗಳಿಗೆ ವೇದಿಕೆ ಒದಗಿಸುವುದರ ಜೊತೆಗೆ ಭಾಷೆಗಳ ನಡುವಿನ ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ನಿಜವಾದ ಕವಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮನ್ನಣೆ ದೊರೆಯಬೇಕು. ಸಾಹಿತ್ಯದ ಮೌಲ್ಯಮಾಪನದಲ್ಲಿ ಪ್ರಚಾರಕ್ಕಿಂತ ಪ್ರತಿಭೆ, ವಾಣಿಜ್ಯ ಹಿತಾಸಕ್ತಿಗಿಂತ ಸೃಜನಶೀಲತೆ ಹಾಗೂ ಆಡಂಬರಕ್ಕಿಂತ ಜೀವನಾನುಭವಕ್ಕೆ ಆದ್ಯತೆ ಸಿಗಬೇಕು ಎಂದು ವಾಸುದೇವ ನಾಡಿಗ್ ಆಶಯ ವ್ಯಕ್ತಪಡಿಸಿದರು. ಹಲಸಂಗಿ ಗೆಳೆಯರ ಬಳಗದ ರಮೇಶ ಕಟ್ಟಿ. ಪ್ರಕಾಶ ಖಾಡೆ. ಶ್ರೀಶೈಲ ನಾಗರಾಜ ಮಾತನಾಡಿದರು. ಕವಿಗೋಷ್ಠಿಯಲ್ಲಿ ಪ್ರಹ್ಲಾದ ಜೋಶಿ. ರಮೇಶ ಬಾಬು. ಧರ್ಮೇಂದ್ರ ಪೂಜಾರಿ. ಧನರಾಜ ಧರಂಪುರ. ಸುಮತಿ ನಿರಂಜನ ಅನೇಕರು ಕವನ ವಾಚನ ಮಾಡಿದರು. ಸುಹಾಸಿನಿ ಗೊನಾಳ ನಿರೂಪಿಸಿದರು. ರೂಪಾ ವಂದಿಸಿದರು.

ನೇಮಕಾತಿ ಪ್ರಕಟಣೆ

HLL Lifecare ನೇಮಕಾತಿ 2026 – 55 ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 12, 2026

HLL Lifecare ನೇಮಕಾತಿ 2026: 55 ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. HLL Lifecare ಲಿಮಿಟೆಡ್, ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಡೆಪ್ಯುಟಿ ಜನರಲ್ ಮ್ಯಾನೇಜರ್ ಮತ್ತು ಜೂನಿಯರ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಮಟ್ಟದ ಸರ್ಕಾರಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಅಕ್ಟೋಬರ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com

ಓವರ್ ಟೇಕ್ ತಂದ ಆಪತ್ತು :

ನಿಂತಿದ್ದ ಲಾರಿಗೆ ಕಾರು ಡಿಕ್ಕಿಯಾಗಿ ಬಿಜೆಪಿ ಮುಖಂಡ ದುರ್ಮರಣ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಸ್ತೆ ಬದಿ ನಿಂತಿದ್ದ ಲಾರಿಗೆ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಮಾಲೂರು ಬಿಜೆಪಿ ಮುಖಂಡ ಮೃತಪಟ್ಟಿರುವ ಘಟನೆ ದೇವನ ಹಳ್ಳಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ರಾತ್ರಿ ನಡೆದಿದೆ.



ಮಾಲೂರು ತಾಲ್ಲೂಕಿನ ಮಾದನಹಟ್ಟಿ ಗ್ರಾಮದ ನಿವಾಸಿ ಶಿವಕುಮಾರ್ (36) ಮೃತಪಟ್ಟವರು. ಇವರು ರಿಯಲ್–ಎಸ್ಟೇಟ್ ನಡೆಸುತ್ತಿದ್ದರು. ಜೊತೆಗೆ ಡೆವಲಪರ್ ಆಗಿದ್ದ ಅವರು ಮೊಣಕಾಲೂರು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ನಿನ್ನೆ ಚಿತ್ರದುರ್ಗದಲ್ಲಿ ಆಯೋಜಿಸಿದ್ದ ವೀರ ಮದಕರಿ ನಾಯಕ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶಿವಕುಮಾರ್ ಅವರು ನಿನ್ನೆ ಬೆಳಗ್ಗೆ ಮಾಲೂರಿನಿಂದ ತಮ ರೇಜ್ ರೋವರ್ ಕಾರಿನಲ್ಲಿ ಚಾಲಕ ಪವನ್ ಹಾಗೂ ಕಚೇ–ರಿಯ ಆಫೀಸ್ ಬಾಯ್‌ಗಳಾದ ಪ್ರದೀಪ ,ವಿನೋದ್‌ಕುಮಾರ್ ಹಾಗೂ ಪಿಎ ಚಂದನ್‌ನೊಂದಿಗೆ ಹೋಗಿದ್ದಾರೆ. ಕಾರ್ಯಕ್ರಮ ಮುಗಿಸಿಕೊಂಡು ಸಂಜೆ 4.30 ರ ಸುಮಾರಿನಲ್ಲಿ ಚಿತ್ರದುರ್ಗದಿಂದ ವಾಪಸ್ ಮಾಲೂರಿಗೆ ಹಿಂದಿರುಗುತ್ತಿದ್ದರು. ಶಿವಕುಮಾರ್ ಅವರು ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತುಕೊಂಡು ಪ್ರಯಾಣಿಸುತ್ತಿದ್ದರೆ, ಪ್ರದೀಪ್, ಚಂದನ್ ಹಾಗೂ ವಿನೋದ್‌ಕುಮಾರ್ ಹಿಂಬದಿ ಸೀಟಿನಲ್ಲಿ ಕುಳಿತಿದ್ದರು.

ಇವರ ಕಾರು ಚಿತ್ರದುರ್ಗದಿಂದ ದಾಬಸ್‌ಪೇಟೆ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ 648 ಮೂಲಕ ದೇವನಹಳ್ಳಿ ಬಳಿಯ ಹೊಸಕೋಟೆ–ದಾಬಸ್‌ಪೇಟೆ ರಿಂಗ್ ರಸ್ತೆಯ ಮುತ್ತಪ್ಪ ರೈ ಲೇಔಟ್ ಸಮೀಪ ರಾತ್ರಿ 7.30 ರ ಸುಮಾರಿನಲ್ಲಿ ಬರುತ್ತಿದ್ದಂತೆ ಕಾರು ಚಾಲನೆ ಮಾಡುತ್ತಿದ್ದ ಪವನ್ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್‌ಟೇಕ್ ಮಾಡಲು ಮುಂದಾಗಿದ್ದಾನೆ. ಆ ಸಂದರ್ಭದಲ್ಲಿ ನಿಯಂತ್ರಣ ತಪ್ಪಿ ರಾಷ್ಟ್ರೀಯ ಹೆದ್ದಾರಿ 3ನೇ ಪಥದಲ್ಲಿ ಯಾವುದೇ ಪಾರ್ಕಿಂಗ್ ಲೈಟ್ ಹಾಕದೆ ನಿಲ್ಲಿಸಿದ್ದ ಲಾರಿಯ ಹಿಂಭಾಗಕ್ಕೆ ಕಾರು ಡಿಕ್ಕಿ ಹೊಡೆದಿದೆ.ಪ–ರಿಣಾಮ ಶಿವಕುಮಾರ್ ಅವರ ಮುಖ,ಕುತ್ತಿಗೆ,ಎದೆ ಸೇರಿದಂತೆ ದೇಹದ ಇತರೆ ಭಾಗಗಳಿಗೆ ಗಂಭೀರ ಪೆಟ್ಟಾಗಿ ರಕ್ತಸ್ರಾವವಾಗಿದೆ. ತಕ್ಷಣ ಸಾರ್ವಜನಿಕರು ನೆರವಿಗೆ ದಾವಿಸಿ ಶಿವಕುಮಾರ್ ಅವರನ್ನು ಕಾರಿನಿಂದ ಹೊರಗೆ ಕರೆತಂದು ಉಪಚರಿಸಿ ನಂತರ ಆಂಬ್ಯುಲೆನ್ಸ್ ನಲ್ಲಿ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಚಾಲಕ ಹಾಗೂ ಇನ್ನುಳಿದ ಮೂವರು ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಸುದ್ದಿ ತಿಳಿದು ದೇವನಹಳ್ಳಿ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ರಸ್ತೆ ಬದಿ ನಿಲ್ಲಿಸಿದ್ದ ಲಾರಿ ಚಾಲಕನ ವಿರುದ್ಧ ಮುಂದಿನ ಕ್ರಮ ಕೈಗೊಂಡಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಅವಧಿ ಮೀರಿದ ಔಷಧಿಗಳನ್ನು ಎಸೆದವರ ವಿರುದ್ಧ ಸೂಕ್ತ ಕಾನೂನು ಕ್ರಮ: ಡಿಹೆಚ್‌ಓ ಡಾ.ನಂದಿತಾ ಸ

ನೈಜ್ಯ ದೆಸೆ ನ್ಯೂಸ್

ರಾಯಚೂರು ಅಕ್ಟೋಬರ್ 14 (ಕರ್ನಾಟಕ ವಾರ್ತೆ): ರಾಯಚೂರು ನಗರದ ಬಸವೇಶ್ವರ ವೃತ್ತ ಹತ್ತಿರದ ಚರಂಡಿಯಲ್ಲಿ ಅಕ್ಟೋಬರ್ 13ರಂದು ಪತ್ತೆಯಾದ ಸಕ್ಕರೆ ಕಾಯಿಲೆ ಮತ್ತು ರಕ್ತದೊತ್ತಡಕ್ಕೆ ಬಳಸುವ ಅವಧಿ ಮೀರಿದ ಔಷಧಿಗಳನ್ನು ಎಸೆದವರ ವಿರುದ್ದ ಎಫ್‌ಐಆರ್ ದಾಖಲಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ.ನಂದಿತಾ ಎಮ್.ಎನ್, ಅವರು ತಿಳಿಸಿದ್ದಾರೆ.



ಆರೋಗ್ಯ ಇಲಾಖೆಯಲ್ಲಿ ಸರಬರಾಜು ಆಗುವ ಔಷಧಿಗಳು ಬಳಕೆ ಮಾಡಿ, ಅವಧಿ ಮೀರಿದಾಗ ನಿಯಮಾನುಸಾರ ಸರಕಾರದ ಮಾರ್ಗಸೂಚಿಯನ್ವಯ ವಿಲೇವಾರಿ ಮಾಡಲಾಗುತ್ತದೆ. ಪ್ರಸ್ತುತ ಈ ಪ್ರಕರಣದಲ್ಲಿ ಔಷಧಿಗಳನ್ನು ಎಸೆದಿರುವವರನ್ನು ಇ–ಔಷಧ ಪೋರ್ಟಾಲ್ ಮುಖಾಂತರ ಟ್ರ್ಯಾಕ್ ಮಾಡಿ ಸಂಬಂಧಿಸಿದವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಸೂಕ್ತ ಕಾನೂನು ಕ್ರಮ ವಹಿಸಲಾಗುವುದು.

ಸದರಿ ಔಷಧಿಗಳು ಗೃಹ ಆರೋಗ್ಯ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಸಮುದಾಯ ಆರೋಗ್ಯ ಅಧಿಕಾರಿಗಳ ಮುಖಾಂತರ ಮನೆ ಮನೆಗೆ ತೆರಳಿ ವಿತರಿಸುವ ಮಾತ್ರೆಗಳಾಗಿವೆ. ಕಳೆದ ಮಾರ್ಚ್, ಎಪ್ರಿಲ್ ತಿಂಗಳಿನಿಂದ ನಿರಂತರವಾಗಿ ಸಭೆಗಳನ್ನು ಹಮ್ಮಿಕೊಂಡು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲಾಗಿದೆ. ಹಾಗೂ ಎಲ್ಲಾ ತಾಲೂಕಗಳಲ್ಲಿ ಔಷಧಗಳ ಬಳಕೆ ಕುರಿತು ನಿರಂತರ ನಿಗಾವಹಿಸಿ ಮಾತ್ರೆಗಳನ್ನು ವಿತರಣೆ ಮಾಡಲಾಗುತ್ತಿದ್ದು, ಇ–ಔಷಧ ಪೋರ್ಟಾಲ್ ನಲ್ಲಿ ದಾಖಲಿಸಿ ವಿತರಿಸಲಾಗುತ್ತಿದೆ. ಸದರಿ ಚರಂಡಿಯಲ್ಲಿ ಔಷಧಿಗಳು ಕಂಡುಬಂದಿರುವ ಮಾಹಿತಿ ಬಂದ ತಕ್ಷಣವೇ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಹಾಗೂ ತಂಡವನ್ನು ಕಳುಹಿಸಿ ಪರಿಶೀಲಿಸಲಾಗಿದ್ದು, ಪತ್ತೆಯಾದ ಔಷಧಿಗಳು ಅವಧಿ ಮೀರಿದ ಔಷಧಿಗಳಾಗಿದ್ದು, ಈಗಾಗಲೇ ಈ ಔಷಧಿಗಳನ್ನು ಸಂಗ್ರಹಿಸಿ ಇಲಾಖೆಯ ಸುಪರ್ಧಿಗೆ ತೆಗೆದುಕೊಂಡು ನಿಯಮನುಸಾರ ಕ್ರಮ ಕೈಗೊಳ್ಳಲಾಗುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾ–ರಿಗಳು ಸ್ಪಷ್ಟೀಕರಣದಲ್ಲಿ ತಿಳಿಸಿದ್ದಾರೆ.

ಮೂರು ದಶಕಗಳ ಆಕ್ರೋಶದ ನೆಲಕ್ಕೆ ಬೀಗ ಪ್ರಜಾಪ್ರಭುತ್ವದ ಧ್ವನಿ ಹತ್ತಿಕುವ ತಂತ್ರ

ನೈಜ್ಯ ದೆಸೆ ನ್ಯೂಸ್

ಯುವ ನೇತತ್ವದ ಸಾಮಾಜಿಕ ರಾಜಕೀಯ ಸಂಘಟನೆಯಾದ ಕಾಕ್ರೋಚ್ ಜನತಾ ಪಾರ್ಟಿ (ಅಎಕ) ಮತ್ತು ವಿವಿಧ ವಿದ್ಯಾರ್ಥಿ ಸಂಘಟನೆಗಳು ದೆಹಲಿಯ ಜಂತರ್ ಮಂತರ್ ನಲ್ಲಿ ಪ್ರತಿಭಟನೆಗೆ ಕರೆ ನೀಡಿದ್ದು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿರುವ, ಪ್ರತಿಭಟನಾಕಾರರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಪಟ್ಟು ಹಿಡಿದಿದ್ದರು.

ಜಂತರ್ ಮಂತರ್ ನಲ್ಲಿ ಹೋರಾಟವು ತೀವ್ರಗೊಂಡಿರುವ ಹಿನ್ನೆಲೆಯಲ್ಲಿ, ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ದೆಹಲಿ ಪೊಲೀಸರು ಬಲವಂತವಾಗಿ ಅಲ್ಲಿಂದ ತೆರವುಗೊಳಿಸಿ, ಅವರ ಟೆಂಟುಗಳನ್ನು ಧ್ವಂಸಗೊಳಿಸಿದ್ದಾರೆ. ಈ ವೇಳೆ ಪೊಲೀಸರು ಲಾಠಿಚಾರ್ಜ್ ಕೂಡ ಮಾಡಿದ್ದಾರೆ.ವಿದ್ಯಾರ್ಥಿ ಯುವ ಜನರ, ಹೋರಾಟಗಾರರ ಮೇಲೆ ಸರ್ಕಾರದ ದಾಳಿ ಹಾಗೂ ಪೊಲೀಸರ ಕ್ರೌರ್ಯವು ಖಂಡನಿಯ.

ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಹೋರಾಟವನ್ನು ಹತ್ತಿಕ್ಕುವ ಕುತಂತ್ರದಿಂದ ದೆಹಲಿಯ ಜಂತರ್ ಮಂತರ್ ನಲ್ಲಿ ಪ್ರತಿಭಟನೆಗೆ ನಿಷೇಧ ಹೇರಲಾಗಿದೆ. ಮತ್ತು ಸಿಜೆಪಿ ಮುಖಂಡರು ಹಾಗೂ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿಚಾರ್ಜ್ ಮಾಡಿ ವಿದ್ಯಾರ್ಥಿಗಳ ಮೇಲೆ ತೀವ್ರ ದಾಳಿಯನ್ನು ನಡೆಸಿ ಹೋರಾಟಗಾರರನ್ನು ವಶಕ್ಕೆ ಪಡೆದು ಅವರ ಮೇಲೆ ಎಫ್‌ಐಆರ್ ದಾಖಲು ಮಾಡಲಾಗಿದೆ.

ಸರ್ಕಾರ ಹಾಗೂ ಪೊಲೀಸರ ಈ ಕ್ರಮವು ತೀವ್ರ ಖಂಡನೀಯ, ಪ್ರಜಾಪ್ರಭುತ್ವವನ್ನು ಹತ್ತಿಕ್ಕುವ ಯತ್ನವನ್ನು ಸರ್ಕಾರ ಮಾಡುತ್ತಿದೆ, ಕಳೆದ 72 ಗಂಟೆಗಳಲ್ಲಿ ದೇಶವು ಸರ್ವಾಧಿಕಾರದ ಉತ್ತುಂಗಕ್ಕೇ–ರಿದೆ,ವಿದ್ಯಾರ್ಥಿ ಯುವ ಜನರ ಧ್ವನಿಯನ್ನು



ಮೌನೇಶ ಜಾಲವಾಡಗಿ
ಜಿಲ್ಲಾ ಸಂಚಾಲಕರು
ದಲಿತ ವಿದ್ಯಾರ್ಥಿ ಪರಿಷತ್ ರಾಯಚೂರು .

ದಮನ ಮಾಡುವ ಪ್ರಯತ್ನ ನಡೆದಿದೆ. ದೆಹಲಿಯ ಹೃದಯ ಭಾಗದಲ್ಲಿ ಮೂರು ದಶಕಗಳಿಂದ ದೇಶದ ಜನರ ಅಸಂಖ್ಯಾತ ಆಕ್ರೋಶಗಳಿಗೆ ದನಿಯಾಗಿದ್ದ ಜಂತರ್ ಮಂತರ್ ಹೋರಾಟದ ಮೈದಾನವು ಪ್ರತಿಭಟನ ಸ್ಥಳಗಳ ಪಟ್ಟಿಯಿಂದ ಡಿನೋಟಿಫೈ ಮಾಡಲಾಗಿದೆ.

ಹಾಗಾಗಿ ವಿದ್ಯಾರ್ಥಿ ಸಂಘಟನೆಯ ಮುಖಂಡರ ಮೇಲಿನ ಎಲ್ಲಾ ದೂರುಗಳು ವಾಪಸ್ ಆಗಲಿ, ಎಸ್‌ಐಆರ್ ರದ್ದಾಗಲಿ, ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಯಾಗಲಿ, ಜಂತರ್ ಮಂತರ್ ಹೋರಾಟದ ಸ್ಥಳವು ಯಥಾವತ್ತಾಗಿ ಅಲ್ಲಿಯೇ ಮುಂದುವರಿಯಲಿ. ಇಲ್ಲದೇ ಹೋದರೆ ದೇಶಾದ್ಯಂತ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿ ಸಂಘಟನೆಗಳು ತೀವ್ರವಾದ ಹೋರಾಟಕ್ಕೆ ಕರೆ ಕೊಡಬೇಕಾಗುತ್ತದೆ. ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ ವತಿಯಿಂದ ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತಿದ್ದೇವೆ.

ಸುರಪುರ ಜೆಸ್ಕಾಂ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ. ಲಂಚ ಪಡೆಯುತ್ತಿದ್ದ ಇಬ್ಬರ ಅಧಿಕಾರಿಗಳು ಲೋಕಾಯುಕ್ತ ಬಲೆಗೆ.

ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಜಿಲ್ಲೆಯ ಸುರಪುರ ಜೆಸ್ಕಾಂ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾ–ರಿಗಳು ದಾಳಿ. ನಗರದ ಹೊರವಲಯದಲ್ಲಿರುವ ಕಾರ್ಯನಿರ್ವಾಹಕ ಅಭಿಯಂತರರು. ಕಾರ್ಯ ಮತ್ತು ವಿಭಾಗೀಯ ಕಚೇರಿಯ ಮೇಲೆ ಯಾದಗಿರಿ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ.

ಲೋಕಾಯುಕ್ತ ಎಸ್ಪಿ ಮತ್ತು ಬಿ ವೈ ಎಸ್ ಪಿ ಮಾರ್ಗದರ್ಶನದಲ್ಲಿ ಮಧ್ಯಾಹ್ನದ ವೇಳೆಗೆ ದಾಳಿ ನಡೆಸಲಾಗಿದೆ. ಲಂಚ ಪಡೆಯುತ್ತಿದ್ದ ವೇಳೆ ಇಬ್ಬರು ಅಧಿಕಾರಿಗಳು ಲೋಕಾಯುಕ್ತ



ಪೊಲೀಸರ ಬಲೆಗೆ ಬಿದ್ದಿದ್ದಾರೆ. ಭ್ರಷ್ಟ ಅಧಿಕಾ–ರಿಗಳನ್ನು ಲೋಕಾಯುಕ್ತ ಕೆಡ್ಡಕ್ಕೆ ಕೆಡಿದಿದ್ದಾರೆ. ತಿಂಥಣಿ ಗ್ರಾಮದ ನಿವಾಸಿ ದ್ವಿತೀಯ ದರ್ಜೆ ಗುತ್ತಿಗೆದಾರ ಬೈರಣ್ಣ ಅಂಬಿಗೇರ ನೀಡಿದ ದೂರನ ಮೇರೆಗೆ ದಾಳಿ ನಡೆಸಲಾಗಿದ್ದು, ಕಲಂ 7(ಬಿ) ಭ್ರಷ್ಟಾಚಾರ ತಡೆ ಕಾಯಿದೆ. 1988(ತಿದ್ದುಪಡಿ ಕಾಯ್ದೆ 2018) ಪ್ರಕರಣ ದಾಖಲಾಗಿದೆ. ದಾಳಿಗೊಳಗಾದ ಅಧಿಕಾರಿಗಳ ಹೆಸರು ಸಚಿನ್ ಯೆಡಕ್ಕೆ ಮತ್ತು ಶ್ರೀಶೈಲ್ ತಮ್ಮದಡ್ಡಿ ಇಬ್ಬರು ಜೆಸ್ಕಾಂ ಸುರಪುರದ ಜೂನಿಯರ್ ಇಂಜಿನಿಯರ್ ಗಳು(JE) ದಾಳಿಯಲ್ಲಿ ಸಿಕ್ಕಿ ಬಿದ್ದ ಅಧಿಕಾರಿಗಳು.

ದ್ವಿತೀಯ ದರ್ಜೆ ಗುತ್ತಿಗೆದಾರ ಬೈರಣ್ಣ ಅಂಬಿಗೇರ್ ಅವರಿಗೆ ಬಾಕಿ ಉಳಿದಿದ್ದ ಕೆಲಸ ಎಂಟು ತಿಂಗಳ ಹಿಂದೆ ಪೂರ್ಣಗೊಂಡಿದ್ದು 3, 63.942. ರೂಪಾಯಿ ಕಾಮಗಾರಿಗೆ ಮಂಜೂರಾತಿ ನೀಡುವುದು ಬಾಕಿ ಇತ್ತು. ಈ ಕುರಿತು ಮಂಜೂರಾತಿ ಮಾಡಲು ಅಧಿಕಾ–ರಿಗಳು 9000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇಂದು 3000 ರೂ ಲಂಚ ಸ್ವೀಕರಿಸುವ ವೇಳೆ ಇಬ್ಬರು ಆರೋಪಿಗಳು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದು ಆರೋಪಿತರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಾಲ್ಯದಲ್ಲಿ ಮದುವೆ ಮಾಡುವುದು, ಹೆಣ್ಣು ಮಗುವಿನ ಆರೋಗ್ಯದ ದೃಷ್ಟಿಯಿಂದ ಅಪಾಯಕಾರಿ

ನೈಜ್ಯ ದೆಸೆ ನ್ಯೂಸ್

ಹೆಣ್ಣು ಮಕ್ಕಳಿಗೆ ಮದುವೆ ಮಾಡುವಾಗ ಹೆಣ್ಣು ಮಗಳ ಆರೋಗ್ಯದ ದೃಷ್ಟಿಯಿಂದ 18 ವರ್ಷಗಳ ವಯಸ್ಸು ಅತಿ ಮುಖ್ಯವೆಂಬುದನ್ನು ಮರೆಯಬಾರದು ಎಂದು ಸಿರವಾರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸುನೀಲ್ ಸರೋದೆ ತೊಳಿಸಿದರು.

ರಾಯಚೂರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಿರವಾರದ ಮೂಲಕ ಜಾನಾಪೂರ ಕ್ಯಾಂಪ್‌ಗೆ ಗ್ರಾಮಕ್ಕೆ ಜನಜಾಗೃತಿ ಕಾರ್ಯಕ್ರಮ ಅಡಿ ಬೇಟಿ ನೀಡಿ ಗ್ರಾಮಸ್ಥರೊಂದಿಗೆ ಮಾತನಾಡುತ್ತಾ, ಬಾಲ್ಯದ ಹಂತದಿಂದ ಹದಿಹರೆಯಕ್ಕೆ ಕಾಲಿಡುವ ಹಂತದಲ್ಲಿ ಮದುವೆ ಮಾಡುವುದರಿಂದ ಹಾಗೂ ಬಾಲ್ಯದಲ್ಲಿಯೇ ಗರ್ಭ ಧರಿಸುವುದ–ರಿಂದ, ರಕ್ತದ ಕೊರತೆ, ಅಧಿಕ ರಕ್ತದೊತ್ತಡ, ಅಪೂರ್ಣ ದೈಹಿಕ ಬೆಳವಣಿಗೆಯಿಂದ ಸಹಜ ಹೆರಿಗೆ ಕಷ್ಟಕರ, ಅವಶ್ಯಕತೆ ಇಲ್ಲದೆ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಒತ್ತಡ, ಕಡಿಮೆ ತೂಕದ ಮಗುವಿನ ಜನನ, ಮಗುವಿನ ದೇಹದ ಬೆಳವಣಿಗೆಯ ಕುಂಟಿತವಾಗುತ್ತದೆ ಎಂದು ತಿಳಿಸಿದರು.

ಅಲ್ಲದೆ ಹೆರಿಗೆ ನಂತರದಲ್ಲಿ ಬಾಣಂತಿಯ ಹಾಗೂ ಮಗುವಿನ ಆರೋಗ್ಯ ದೃಷ್ಟಿಯಿಂದ ಮತ್ತು ಮಗುವಿನ ಆರೋಗ್ಯಕರ ಬೆಳವಣಿಗೆಗೆ ಎರಡನೇ ಮಗುವಿನ ಜನನಕ್ಕೆ ಕನಿಷ್ಠ 3 ವರ್ಷಗಳ ಅಂತರವಿಡಲು ಇಲಾಖೆಯಲ್ಲಿ ಉಚಿತವಾಗಿ ಕುಟುಂಬ ಕಲ್ಯಾಣ ವಿಧಾನಗಳು



ಲಭ್ಯವಿದ್ದು, ಅವುಗಳಲ್ಲಿ ಮಹಿಳೆಯ–ರಿಗೆ ಲಭ್ಯವಿರುವ ಕಾಪರ್–ಟಿ, ಮಾಲಾ–ಎನ್, ಛಾಯಾ(ಮಾತ್ರೆಗಳು), ಪ್ರತಿ ಮೂರು ತಿಂಗಳಿಗೊಮ್ಮೆ ಪಡೆಯಬಹುದಾದ ಅಂತರ ಚುಚ್ಚುಮದ್ದು, ಹಾಗೂ ಪುರುಷರಿಗೆ ಲಭ್ಯವಿರುವ ಕಾಂಡೊಮ್ ಬಳಸುವಿಕೆಯಿಂದ ಮಗುವಿನ ಜನನದ ಮಧ್ಯ ಕನಿಷ್ಟ ಮೂರು ವರ್ಷಗಳ ಅಂತರ ಕಾಪಾಡಲು ಸಹಕಾರಿ ಎಂದು ತಿಳಿಸಿದರು. ಮಕ್ಕಳು ಬೇಡವೆನಿಸಿದರೆ ಲ್ಯಾಪರ್‌ಸ್ಕೋಪ್, ಟ್ಯುಬೆಕ್ಟೂಮಿ, ಶಸ್ತ್ರಚಿಕಿತ್ಸೆ ಲಭ್ಯವಿದೆ. ಪುರುಷರಿಗೆ ಎನ್‌ಎಸ್‌ವಿ ಶಸ್ತ್ರಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಅರೋಗ್ಯ ಶಿಕ್ಷಣಾಧಿಕಾರಿ ಶ್ರೀದೇವಿ, ಹಿರಿಯ ಆರೋಗ್ಯ ನೀರಕ್ಷಣಾಧಿಕಾರಿ ಧರ್ಮಾರೆಡ್ಡಿ, ಪ್ರಾಥ–ಮಿಕ ಆರೋಗ್ಯ ಸುರಕ್ಷಾಧಿಕಾರಿ ಚಿತ್ರಾ, ಅಂಗನವಾಡಿ ಕಾರ್ಯಕರ್ತೆ ಲಕ್ಷ್ಮೀ, ಗ್ರಾಮಸ್ಥರು, ತಾಯಂದಿರು ಉಪಸ್ಥಿತರಿದ್ದರು.

ತಿಹಾರ್ ಜೈಲು ಸೇರಿದ ಜಿರಳೆಗಳು : ಸೌರವ್, ಆಶುತೋಷ್‌ಗೆ 5 ದಿನಗಳ ನ್ಯಾಯಾಂಗ ಬಂಧನ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಶಾಂತಿ ಕಾಪಾಡುವ ನಿಯಮ ಉಲ್ಲಂಘನೆ ಮತ್ತು ಪ್ರತಿಭಟನೆಗೆ ನಿಗದಿಪಡಿಸಿದ್ದ ಪ್ರದೇಶವಾಗಿ ಅಧಿಸೂಚನೆ ರದ್ದುಗೊಳಿಸಲಾದ ಜಂತರ್ ಮಂತರ್‌ಗೆ ಅಕ್ರಮವಾಗಿ ಪ್ರವೇಶಿಸಿದ ಆರೋಪದ ಮೇಲೆ ಕಾಕ್‌ರೋಚ್ ಜನತಾ ಪಾರ್ಟಿ (ಸಿಜೆಪಿ) ನಾಯಕರಾದ ಸೌರವ್ ದಾಸ್ ಹಾಗೂ ಆಶುತೋಷ್ ರಂಕಾ ಅವರನ್ನು ಐದು ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇಂದು ಬೆಳಿಗ್ಗೆ ಅವರನ್ನು ತಿಹಾರ್



ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಇದೇ ಪ್ರಕರಣದಲ್ಲಿ ಬಂಧಿತರಾಗಿದ್ದ ಅವರ ಸಹಚರ ಅಜಿಂಕ್ಯ ಶಿಂಧೆ ಅವರ ಜಾಮೀನು ಬಾಂಡ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ ಎಂದು ಮೂಲಗಳು ತಿಳಿಸಿವೆ. ಇಂದು ಬೆಳಗ್ಗೆ ಮೂವರನ್ನೂ ಮತ್ತೆ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು.

ನಿನ್ನೆ ಮುಂಜಾನೆ ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ದಾಟಿ, ಅನುಮತಿಯಿಲ್ಲದೆ ಜಂತರ್ ಮಂತರ್ ಪ್ರದೇಶವನ್ನು ಪ್ರವೇಶಿಸಿದ ಆರೋಪದ ಮೇಲೆ ಅವರನ್ನು ವಶಕ್ಕೆ ಪಡೆಯಲಾಗಿತ್ತು. ಅಕ್ರಮ ಪ್ರವೇಶ, ನಿಷೇಧಾಜ್ಞೆಗಳ ಉಲ್ಲಂಘನೆ, ಶಾಂತಿ ಕಾಪಾಡುವ ನಿಯಮ ಉಲ್ಲಂಘನೆ ಹಾಗೂ ಸರ್ಕಾರಿ ನೌಕರರು ತಮ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ ಆರೋಪಗಳು ಸೇರಿದಂತೆ ವಿವಿಧ ಆರೋಪಗಳಡಿ ಸಿಜೆಪಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಳೆದ ಶನಿವಾರ ನಡೆದ ಪ್ರತಿಭಟನೆಯ ವೇಳೆ ವಶಕ್ಕೆ ಪಡೆಯಲಾಗಿದ್ದ ದಾಸ್ ಮತ್ತು ರಂಕಾ, ಒಂದು ವರ್ಷದವರೆಗೆ ಶಾಂತಿ ಕಾಪಾಡುವುದಾಗಿ ಬಾಂಡ್‌ಗೆ ಸಹಿ ಹಾಕಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಟ್ರಾಫಿಕ್ ಸಮಸ್ಯೆಯನ್ನು ನಿಯಂತ್ರಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವಂತೆ ಕ ಜ ಹೊ ಸ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಕೆಲವು ಖಾಸಗಿ ಬಸ್‌ಗಳು ತಮಗೆ ನಿಗದಿಪಡಿಸಿದ ಪರ್ಮಿಟ್ ನಿಯಮಗಳು ಹಾಗೂ ಸಂಚಾರ ನಿಯಮಗಳನ್ನು ಉಲ್ಲಂಘಿಸಿ, ಮುಖ್ಯ ರಸ್ತೆಯಲ್ಲಿಯೇ ಬಸ್‌ಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿರುವುದು ಮುಖ್ಯ ರಸ್ತೆಯ ಪಕ್ಕದಲ್ಲಿಯೇ ಸರ್ವಿಸ್ ರಸ್ತೆ ಇದ್ದರೂ, ಕೆಲವು ಖಾಸಗಿ ಬಸ್‌ಗಳು ಮುಖ್ಯ ರಸ್ತೆಯಲ್ಲೇ ನಿಲ್ಲುವುದರಿಂದ ನಾಲ್ಕು ದಿಕ್ಕುಗಳಿಂದ ಬರುವ ವಾಹನಗಳ ಸಂಚಾರಕ್ಕೆ ತೀವ್ರ ಅಡಚಣೆಯಾಗುತ್ತಿದೆ.

ಇದರಿಂದ ಕೆಲವೊಮ್ಮೆ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿ, ವಾಹನ ಸವಾರರು, ಸಾರ್ವಜನಿಕರು, ಹಾಗೂ ತುರ್ತು ಸೇವಾ ವಾಹನಗಳು ತೊಂದರೆ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕರ್ನಾಟಕ ಜನಪರ ಹೋರಾಟ ಸಮಿತಿಯ ತಾಲೂಕ ಅಧ್ಯಕ್ಷ ವೆಂಕಟೇಶ್



ಇಸಾಂಪುರ್ ನೂತನ ಡಿ ವೈ ಎಸ್ ಪಿ ಸುಲೈಮಾನ್ ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿದರು .

ಪಟ್ಟಣದ ಬಸ್ ನಿಲ್ದಾಣ ಮತ್ತು ಗಡಿಯಾರ ಚೌಕದಲ್ಲಿ ಮುಖ್ಯ ರಸ್ತೆ ಮತ್ತು ರಸ್ತೆ ಬದಿಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ವ್ಯಾಪಾರ ನಡೆಸುತ್ತಿರುವುದರಿಂದ ಸಾರ್ವಜನಿಕರಿಗೆ ಸಮಸ್ಯೆಗಳು ಎದುರಾಗುತ್ತಿವೆ. ಹಾಗೂ ಗಡಿಯಾರ್ ಚೌಕ ಕೂಡ ಮುಖ್ಯರಸ್ತೆ ಆಗಿರುವುದರಿಂದ ಗಡಿಯಾರ್ ಚೌಕ್ ಸುತ್ತಮುತ್ತ ರೋಡ್ ನಲ್ಲಿ ವ್ಯಾಪಾರಿಗಳು ಬಂಡಿಗಳು ಹೆಚ್ಚುವುದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ.

ಸಂಚಾರ ವ್ಯವಸ್ಥೆ ಸುಗಮವಾಗಿರಬೇಕು ಹಾಗೂ ಸಾರ್ವಜನಿಕರು ಯಾವುದೇ ತೊಂದರೆಯಿಲ್ಲದೆ ಸಂಚರಿಸುವಂತಾಗಬೇಕು ಎಂಬುದು ನಮ್ಮ ಆಶಯವಾಗಿದೆ. ಖಾಸಗಿ ಬಸ್‌ಗಳು ನಿಗದಿತ ನಿಲ್ದಾಣಗಳಲ್ಲಿ ಮಾತ್ರ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಪರ್ಮಿಟ್ ನಿಯಮಗಳು ಹಾಗೂ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಖಾಸಗಿ ಬಸ್‌ಗಳ ವಿರುದ್ಧ ಕಾನೂನು ಬದ್ದ ಕ್ರಮ ಕೈಗೊಳ್ಳಬೇಕು. ಸರ್ವಿಸ್ ರಸ್ತೆ ಮತ್ತು ನಿಗದಿತ ಬಸ್ ನಿಲ್ದಾಣಗಳನ್ನು ಸಮರ್ಪಕವಾಗಿ ಬಳಸುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕು.

ಮುಖ್ಯ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟುಮಾಡುವ ವಾಹನಗಳು ಹಾಗೂ ರಸ್ತೆ ಸಂಚಾರಕ್ಕೆ ಅಡ್ಡಿಯಾಗುವ ಚಟುವಟಿಕೆಗಳನ್ನು ನಿಯಂತ್ರಿಸಬೇಕು. ಪಟ್ಟಣದ ಪ್ರಮುಖ ವೃತ್ತಗಳು ಮತ್ತು ನಾಲ್ಕು ರಸ್ತೆ ಸೇರುವ ಸ್ಥಳಗಳಲ್ಲಿ ಸಂಚಾರ ಸುಗಮಗೊಳಿಸಲು ಅಗತ್ಯವಿದ್ದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಮಹಿಬೂಬ್ ಪಾಷ್ ಮನಿಯಾರ ತಾ. ಗೌರವಾಧ್ಯಕ್ಷರು , ರವಿಕುಮಾರ , ವಿಜಯಕುಮಾರ ಮೇಟಿ , ತಾಲೂಕ ಕಾರ್ಯಧ್ಯಕ್ಷ ಬಾಬು ಜಾನಿ , ತಾಲೂಕ ಪ್ರಧಾನ ಕಾರ್ಯದರ್ಶಿ ವಿಶ್ವನಾಥ , ಮೌನೇಶ ಬುಳ್ಳಾಪೂರ , ಖಾದರ ಪಾಷ , ರಮೇಶ ಕೋತಾ , ತಿರುಮಲ ಕೋತಾ ಸೇರಿದಂತೆ ಇತರರು ಇದ್ದರು .

ವಚನ ದರ್ಶನ

ಶೂಲದ ಮೇಲಣ ವಿಭೋಗವೇನಾದಡೇನೊ?ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!ತನ್ನಾತ್ಮ ತನಗೆ ಹಗೆಯಾದ ಮತ್ತೆಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ

"ಶೂಲದ ಮೇಲಣ ವಿಭೋಗವೇನಾದಡೇನೊ" ಎಂಬುದು ಭಕ್ತಿ ಭಂಡಾರಿ ಜಗಜ್ಯೋತಿ ಬಸವಣ್ಣನವರ ಒಂದು ಪ್ರಸಿದ್ಧವಾದ ವಚನವಾಗಿದೆ

ಶೂಲದ ಮೇಲಣ ವಿಭೋಗವೇನಾದಡೇನೊ? ಮರಣದಂಡನೆಗೆ ಗುರಿಯಾಗಿ ಶೂಲದ (ಕತ್ತಿಯ ಮೊನೆ ಅಥವಾ ಕಂಬದ) ಮೇಲೆ ನಿಂತಿರುವ ವ್ಯಕ್ತಿಗೆ ಎಂತಹ ರಾಜಭೋಗ, ರುಚಿಕರವಾದ ಊಟ ಅಥವಾ ಐಷಾರಾಮಿ ಸೌಲಭ್ಯಗಳನ್ನು ನೀಡಿದರೂ ಅದರಿಂದ ಏನು ಪ್ರಯೋಜನ? ಸಾವು ಎದುರಿಗಿರುವಾಗ ಆ ಭೋಗವೆಲ್ಲವೂ ವ್ಯರ್ಥ ಹಾಗೂ ಕ್ಷಣಿಕ.

ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ! ಈ ಲೌಕಿಕ ಜಗತ್ತಿನ ಸಂಸಾರ ಮತ್ತು ಆಕರ್ಷಣೆಗಳು ಹಾವಾಡಿಗ ಹಾಗೂ ಹಾವಿನ ನಡುವಿನ ಸ್ನೇಹದ ಹಾಗೆ. ಹಾವಾಡಿಗನು ಹಾವನ್ನು ಎಷ್ಟು ಪ್ರೀತಿಯಿಂದ ಸಾಕಿದರೂ, ಅದು ಯಾವಾಗ ಕಚ್ಚಿ ಪ್ರಾಣ ತೆಗೆಯುತ್ತದೋ ತಿಳಿಯದು. ಹಾಗೆಯೇ ಸಂಸಾರದ ಸುಖವೂ ಯಾವಾಗ ದುಃಖವಾಗಿ ಕಾಡುತ್ತದೋ ಹೇಳಲಾಗದು.

ತನ್ನಾತ್ಮ ತನಗೆ ಹಗೆಯಾದ ಮತ್ತೆ ಬಿನ್ನಾಣವುಂಟೆ...?:
ಒಬ್ಬ ಮನುಷ್ಯನ ಸ್ವಂತ ಆತ್ಮವೇ (ಅವನ ಒಳಮನಸ್ಸು ಅಥವಾ ವಿವೇಕ) ಅವನಿಗೆ ಶತ್ರುವಾದ ಮೇಲೆ, ಅವನ ಬುದ್ಧಿವಂತಿಕೆ ಅಥವಾ ಚಾತುರ್ಯದಿಂದ ಯಾವುದೇ ಪ್ರಯೋಜನವಿಲ್ಲ. ತನ್ನನ್ನು ತಾನು ಅರಿಯದವನಿಗೆ ಲೋಕದ ಜ್ಞಾನ ವ್ಯರ್ಥ.

ಮಹಾದಾನಿ ಕೂಡಲಸಂಗಮದೇವಾ ಬಸವಣ್ಣನವರು ತಮ್ಮ ಆರಾಧ್ಯ ದೈವವಾದ ಕೂಡಲಸಂಗಮದೇವನಲ್ಲಿ, ಇಂತಹ ಕ್ಷಣಿಕ ಸಂಸಾರದ ಮಾಯೆಯಿಂದ ತನ್ನನ್ನು ಪಾರುಮಾಡಿ ಒಳಿತನ್ನು ಕರುಣಿಸು ಎಂದು ಬೇಡಿಕೊಳ್ಳುತ್ತಾರೆ.
ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ–ಸಿಂಧನೂರು. 998094144

ಹಾಲಲ್ಲದ ಹಣೆಬರಹ:

ಡಿಜಿಟಲ್ ಜಗತ್ತನ್ಯಾಗ ಕಳೆದುಹೋಗ್ತಿರೋ ಹಸಿರು ಮತ್ತು ಹಳ್ಳಿ ಆರೋಗ್ಯ

ನೈಜ್ಯ ದೆಸೆ ನ್ಯೂಸ್

– ಬಡಿಗೇರ್ ಜಿಲಾನಸಾಬ್

"ಹಸಿರಿದ್ದರೆ ಉಸಿರೈತಿ, ಹಳ್ಳಿಯೊಳಗ ಜೀವದ ಕಳೆಯೈತಿ" ಅಂತ ನಮ್ಮ ಹಿರಿಯರು ಸುಮ್ಮನೆ ಹೇಳಿಲ್ಲ. ಆದರೆ ಇವತ್ತಿನ ದಿವಸ ನಮ್ಮ ಕಣ್ಣ ಮುಂದಿನ ಜಗತ್ತನ್ನ ಒಮ್ಮೆ ನೋಡಿಬಿಟ್ರೆ ಎದೆ ಝಲ್ ಅನ್ನುತ್ತದೆ. ಎತ್ತ ನೋಡಿದ್ರೂ ಮೊಬೈಲು, ಎಲ್ಲಿ ನೋಡಿದ್ರೂ ಇಂಟರ್ನೆಟ್ಟು! ಅಕ್ಕಪಕ್ಕದ ಮನುಷ್ಯರ ಮುಖ ನೋಡಿ ಮಾತಾಡೋ ಕಾಲ ಹೋಗಿ, ನಾಲ್ಕು ಇಂಚಿನ ಗಾಜಿನ ಪರದೆ ಒಳಗೆ ಇಡೀ ಜಗತ್ತನ್ನ ಹುಡುಕೋ ಹುಚ್ಚು ಹಿಡಿದಿದೆ ನಮಗೆ. ಹೊಸ ಕಾಲದ ತಂತ್ರಜ್ಞಾನ ನಮಗೆ ಬೇಕಾದ್ದನ್ನೆಲ್ಲಾ ಅಂಗೈಗೆ ತಂದು ಕೊಟ್ಟಿದೆ ನಿಜ, ಆದ್ರೆ ಅದಕ್ಕೋಸ್ಕರ ನಾವು ನಮ್ಮ ಹೆತ್ತವ್ವನಂತಿರೋ ಪ್ರಕೃತಿಯನ್ನು ಮತ್ತು ನರಪಿಳ್ಳೆಯ ಆರೋಗ್ಯವನ್ನು ಪಣಕ್ಕೆ ಇಡುತ್ತಿದ್ದೇವಾ ಅನ್ನುವ ದೊಡ್ಡ ಸಂಶಯ ಇವತ್ತು ನಮ್ಮ ಎದುರಿಗೆ ಬಂದು ನಿಂತಿದೆ.

ಕೈಯಾಗ ಮೊಬೈಲು, ಮೈಯಾಗ ಜಡತ್ವ: ಕಳೆದುಹೋದ ಕಾಯಕ ಯೋಗ
ಒಂದ್ಕಾಲ ಇತ್ತಪ್ಪಾ... ಬೆಳಗಿನ ಜಾವ ಕೋಳಿ ಕೂಗೋಕೂ ಮುಂಚೆ ಎದ್ದು, ತಣ್ಣಗಿನ ಮುಂಜಾವಿನ ಗಾಳಿ ಸವಿಯುತ್ತಾ, ಮೈ ಬಗ್ಗಿಸಿ ದುಡಿಯೋಕೆ ಹೊಲಕ್ಕೆ ಹೋಗ್ತಿದ್ವಿ. ಮೈಯೆಲ್ಲಾ ಬೆವತು ಹೋದ್ರೂ ಮನಸ್ಸಿನಾಗ ಒಂದು ತರಹದ ನೆಮ್ಮದಿ ಇರ್ತಿತ್ತು. ಆದ್ರೆ ಇವತ್ತಿನ ಈ ಕೃತಕ ಬುದ್ಧಿಮತ್ತೆ (೦ಖ) ಮತ್ತು 5ಉ ಕಾಲದಾಗ, ಬೆಳಗಿನ ಅಲಾರಂನಿಂದ ಹಿಡಿದು ರಾತ್ರಿ ಕಣ್ಣು ಮುಚ್ಚೋವರೆಗೂ ಮನುಷ್ಯ ಕಂಪ್ಯೂಟ–ರ್ ಮುಂಭಾಗದಲ್ಲೇ ಕುಳಿತುಬಿಡ್ತಾನೆ. ಮೈ ಬಗ್ಗಿಸಿ ಮಾಡೋ ಕಾಯಕ ಮರೆತು ಹೋಗಿದೆ. ಇದರ ಫಲವಾಗಿ ಏನಾಗ್ತಿದೆ ಅಂದ್ರೆ, ವಯಸ್ಸು ಮೂವತ್ತು ದಾಟೋಕೂ ಮುಂಚೆಯೇ ಕಣ್ಣಿನ ದೋಶ, ಬೆನ್ನುನೋವು, ಕೈಕಾಲು ಕಸುವಿಲ್ಲದಂತಾಗೋದು ಮನೆ ಮಾಡ್ತಿವೆ. ಅದಕ್ಕಿಂತ ದೊಡ್ಡ ರೋಗ ಅಂದ್ರೆ ಮಾನಸಿಕ ಖಿನ್ನತೆ. ಸೋಶಿಯಲ್ ಮೀಡಿಯಾದಾಗ ಯಾರೋ ಹಾಕಿದ ಫೋಟೋ ನೋಡಿ, ನಮ್ಮ ಬದುಕನ್ನು ಅವರ ಜೊತೆ ಹೋಲಿಸಿಕೊಂಡು ನೆಮ್ಮದಿ ಕೆಡಿಸಿಕೊಳ್ಳೋದು ಇವತ್ತಿನ ಯುವ ಪೀಳಿಗೆಗೆ ಒಂದು ರೋಗವಾಗಿ ಬಿಟ್ಟಿದೆ. ನಾವು ಜಗತ್ತಿನ ಎಲ್ಲ ದೇಶಗಳಿಗೂ ನೆಟ್‌ವರ್ಕ್ ಮೂಲಕ ಕನೆಕ್ಟ್ ಆಗ್ತಿದೀವಿ, ಆದ್ರೆ ನಮಗೆ ಜೀವ ಕೊಟ್ಟಿರೋ ಮೈ–ಮನಸ್ಸಿನ ಜೊತೆಗೇ ಡಿಸ್ಕನೆಕ್ಟ್ ಆಗ್ತಿದೀವಿ!

ಇ–ತ್ಯಾಜ್ಯದ ಕಾಟ: ಭೂಮಿತಾಯಿಗೆ ಹತ್ತಿದ ತಾಂತ್ರಿಕ ಜ್ವರ
ನಮ್ಮ ಜನಪದ ಸಾಹಿತ್ಯದಾಗ ಮಣ್ಣನ್ನು ದೇವರೆಂದು ಪೂಜಿಸ್ತೀವಿ. ಆದ್ರೆ ಇವತ್ತಿನ ಈ ನವನಾಗ–ರಿಕತೆ ಭೂಮಿತಾಯಿಯ ಒಡಲಿಗೆ ಇ–ತ್ಯಾಜ್ಯದ (ಇ–ತಿಛಿಣಜ) ವಿಷ ಉಣಿಸುತ್ತಿದೆ. ವರ್ಷಕ್ಕೊಂದು ಮೊಬೈಲು ಬದಲಾಯಿಸೋ ಚಟ, ಹಾಳಾದ ಚಾರ್ಜರುಗಳು, ಕಂಪ್ಯೂಟರ್ ಬಿಡಿಭಾಗಗಳು ಎಲ್ಲವೂ ಕಸದ ರಾಶಿಯಾಗಿ ಮಣ್ಣು ಸೇರುತ್ತಿವೆ. ಈ ಪ್ಲಾಸ್ಟಿಕ್ ಮತ್ತು ತಾಂತ್ರಿಕ ಕಸ ವಿಲೇವಾರಿಯಾಗದೆ ಭೂಮಿಯ ಫಲವತ್ತತೆಯನ್ನು ಸಂಪೂರ್ಣವಾಗಿ ಉಡುಗಿಸುತ್ತಿದೆ. ನಗರಗಳ ಕಥೆ ಬಿಡಿ, ನಮ್ಮ ಹಳ್ಳಿಗಳಲ್ಲೂ ಕಾಂಕ್ರೀಟ್ ರಸ್ತೆಗಳು ಬಂದು, ಹಸಿರು ಮಾಯವಾಗಿ, ಶುದ್ಧ ಗಾಳಿಗಾಗಿ ಹಪಹಪಿಸುವ ಪರಿಸ್ಥಿತಿ ಬಂದಿದೆ. ಹಸಿ–ರಿಲ್ಲದ ಊರು ಹಸುವಿಲ್ಲದ ಕೊಟ್ಟಿಗೆಯಂತೆ ಪಾಳು ಬಿದ್ದ ಹಾಗೆ ಕಾಣುತ್ತಿದೆ.

ಉಪಾಯವೇನು ಹಳ್ಳಿ ಸೊಗಡಿನ ಸುಸ್ಥಿರ ಬದುಕು



ಹಾಗಂತ ನಾವು ಮೊಬೈಲ್ ಒಡೆದು ಹಾಕಿ, ಕಾಲದ ಜೊತೆ ಹಿಂದಕ್ಕೆ ಹೋಗೋಕೆ ಸಾಧ್ಯವಿಲ್ಲ. ನಮಗೆ ತಂತ್ರಜ್ಞಾನವೂ ಬೇಕು, ತಾಯಿಯಂತಿರೋ ಪ್ರಕೃತಿಯೂ ಬೇಕು. ಇವೆರಡನ್ನೂ ಸಮತೋಲನ ಮಾಡೋಕೆ ಕೆಲವು ಸರಳ ಹಳ್ಳಿ ಸೂತ್ರಗಳು ಇಲ್ಲಿವೆ:
1. ಡಿಜಿಟಲ್ ಉಪವಾಸ (ಆರುಣಚಿಟ ಆಜಣಂಥ): ನಮ್ಮ ಹಿರಿಯರು ವಾರಕ್ಕೊಮ್ಮೆ ಏಕಾದಶಿ ಉಪವಾಸ ಮಾಡ್ತಿದ್ರಲ್ಲ, ಹಾಗೆ ನಾವೀಗ ವಾರದಲ್ಲಿ ಕನಿಷ್ಠ ಅರ್ಧ ದಿನವಾದ್ರೂ ಮೊಬೈಲ್‌ಗೆ ಉಪವಾಸ ಹಾಕಬೇಕು. ಆ ಸಮಯದಲ್ಲಿ ಫೋನ್ ಪಕ್ಕಕ್ಕಿಟ್ಟು ಹಿರಿಯರ ಜೊತೆ ಹರಟೆ ಹೊಡೆಯಬೇಕು, ಮಕ್ಕಳಿಗೆ ಜಾನಪದ ಕಥೆ ಹೇಳಬೇಕು ಇಲ್ಲವೇ ಗಿಡಮರಗಳ ಮಧ್ಯೆ ನಡೆದಾಡಬೇಕು.
2. ಬಾಲ್ಕನಿಯಲ್ಲೊಂದು ಹಸಿರು ಸಿರಿ: ಜಾಗ ಇಲ್ಲ ಅಂತ ನೆಪ ಹೇಳಬೇಡಿ. ಮನೆ ಮುಂದೆ ಜಾಗ ಇರದಿದ್ದರೆ ಟೆರೇಸ್ ಮೇಲೋ, ಕಿಟಕಿಯಲ್ಲೋ ಸಣ್ಣ ಸಣ್ಣ ಕುಂಡಗಳನ್ನಿಟ್ಟು ತುಳಸಿ, ಅಲೋವೆರಾ ಅಥವಾ ತರಕಾರಿ ಗಿಡಗಳನ್ನು ಬೆಳೆಸಿ. ಅದು ಕೊಡುವ ಶುದ್ಧ ಗಾಳಿ ಮತ್ತು ಮಾನಸಿಕ ಶಾಂತಿ ಕೋಟಿ ರೂಪಾಯಿ ಕೊಟ್ಟರೂ ಸಿಗಲ್ಲ.
3. ಸಿರಿಧಾನ್ಯಗಳ ಊಟ, ಯೋಗದ ಆಟ: ಬೇಕರಿ ತಿಂಡಿ, ಪ್ಯಾಕ್ ಮಾಡಿದ ಜಂಕ್ ಫುಡ್ ಸಂಸ್ಕೃತಿಯನ್ನು ಮರೆತು ನಮ್ಮ ಮಣ್ಣಿನ ಸತ್ವವಿರೋ ನವಣೆ, ಸಜ್ಜೆ, ಜೋಳದ ರೊಟ್ಟಿ ಅಂತಹ ಸಿರಿಧಾನ್ಯಗಳ ಊಟಕ್ಕೆ ಮರಳಬೇಕಿದೆ. ದಿನಕ್ಕೆ ಕನಿಷ್ಠ ಇಪ್ಪತ್ತು ನಿಮಿಷ ಪ್ರಾಣಾಯಾಮ ಅಥವಾ ಯೋಗ ಮಾಡುವುದರಿಂದ ದೇಹದ ದಣಿವು ಆರಿ, ಮನಸ್ಸು ನಿರಾಳವಾಗುತ್ತದೆ.

ಅಭಿವೃದ್ಧಿ ಅನ್ನೋದು ಮನುಷ್ಯನ ಹಿತಕ್ಕಾಗಿ ಇರಬೇಕೇ ಹೊರತು, ಹಸಿರನ್ನು ಮತ್ತು ನಮ್ಮ ಆರೋಗ್ಯದ ಜೀವಕೋಶಗಳನ್ನು ಬಲಿಗೊಟ್ಟು ಪಡೆಯುವಂಥದ್ದಾಗಬಾರದು. ಪ್ರಕೃತಿಯನ್ನು ಗೌರವಿಸುತ್ತಾ, ಆರೋಗ್ಯವನ್ನು ಕಾಯ್ದುಕೊಂಡು ತಂತ್ರಜ್ಞಾನವನ್ನು ಮಿತವಾಗಿ ಬಳಸಿದಾಗ ಮಾತ್ರ ನಮ್ಮ ಮುಂದಿನ ಪೀಳಿಗೆಗೆ ಒಂದು ಸುಂದರ, ಹಸಿರು ತುಂಬಿದ ಹಸನ್ಮುಖಿ ನಾಳೆಯನ್ನು ಕೊಡಲು ಸಾಧ್ಯ. ಇದೇ ಇವತ್ತಿನ ಆಧುನಿಕ ಸಮಾಜ ಅರಿತುಕೊಳ್ಳಬೇಕಾದ ಪರಮ ಸತ್ಯ.

ಇಂದಿನಿಂದ ರಾಜ್ಯದಲ್ಲಿ 4 ದಿನ ಸಾಧಾರಣ ಮಳೆ ಸಾಧ್ಯತೆ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ನೈರುತ್ಯ ಮುಂಗಾರು ಮರಳುವಿಕೆ ಹಾಗೂ ಈಶಾನ್ಯ ಹಿಂಗಾರು ಮಳೆ ಪ್ರಾರಂಭಕ್ಕೆ ಪೂರಕವಾದ ವಾತಾವರಣ ನಿರ್ಮಾಣವಾಗುತ್ತಿದ್ದು, ಇಂದಿನಿಂದ ಅ.19ರವರೆಗೆ ಸಾಧಾರಣ ಮಳೆಯಾಗುವ ನಿರೀಕ್ಷೆಗಳಿವೆ. ಹೀಗಾಗಿ ರಾಜ್ಯದಲ್ಲಿ ಮತ್ತೊಂದು ಸುತ್ತಿನ ಮಳೆ ನಿರೀಕ್ಷಿಸಬಹುದಾಗಿದೆ.



ರಾಜ್ಯದಲ್ಲಿ ಕಳೆದ ಒಂದು ವಾರದಿಂದಲೂ ಒಣಹವೆ ಮುಂದುವರೆದಿದ್ದು, ಬರದ ತೀವ್ರತೆ ಹೆಚ್ಚಾಗಿದೆ. ಭಾಗಶಃ ಮೋಡ ಕವಿದ ವಾತಾವರಣ ಕಂಡುಬರುತ್ತಿದ್ದು, ಕೆಲವೆಡೆ ಮಾತ್ರ ಮಳೆಯಾಗುತ್ತಿದೆ. ಆಗಾಗ್ಗೆ ತಂಪಾದ ಹಾಗೂ ಬಲವಾದ ಮೇಲ್ಮೈ ಗಾಳಿ ಬೀಸುತ್ತಿದೆ. ನಾಳೆಯಿಂದ ಮಳೆಯ ಪ್ರಮಾಣ ಹೆಚ್ಚಾಗಲಿದ್ದು, ಅಲ್ಲಲ್ಲಿ ಚದು–ರಿದಂತೆ ರಾಜ್ಯದ ಹಲವೆಡೆ ಮಳೆಯಾಗುವ ಮುನ್ಸೂಚನೆಗಳಿವೆ. ಕರಾವಳಿ, ಮಲೆನಾಡು. ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ ಚದುರಿದಂತೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೆ, ವ್ಯಾಪಕ ಹಾಗೂ ಭಾರಿ ಮಳೆಯಾಗುವ ಲಕ್ಷಣಗಳಿಲ್ಲ. ಕರಾವಳಿ ಭಾಗದ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನದಲ್ಲಿ ಏರಿಕೆ ಕಂಡುಬರಲಿದೆ. ಅ.16ರಿಂದ ಮೂರು ದಿನಗಳ ಕಾಲ ಭಾಗಶಃ ವ್ಯಾಪಕ ಪ್ರಮಾಣದ ಮಳೆಯಾಗುವ ಸಾಧ್ಯತೆಗಳಿವೆ. ಈ ಅವಧಿಯಲ್ಲಿ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಬಲವಾದ ಮೇಲ್ಮೈ ಗಾಳಿ ಗಂಟೆಗೆ 40 ಕಿ.ಮೀ.ವೇಗದಲ್ಲಿ ಬೀಸುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ನಾಳೆ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಗಳಿವೆ. ಅ.16ರಂದು ಬೆಂಗಳೂರು ಸೇರಿದಂತೆ ರಾಜ್ಯದ ಕೆಲವೆಡೆ ಭಾರಿ ಮಳೆಯಾಗುವ ಮುನ್ಸೂಚನೆಗಳಿವೆ. ಅ.17 ಮತ್ತು 18 ರಂದು ರಾಜ್ಯಾದ್ಯಂತ ಮಳೆ ಹೆಚ್ಚಾಗುವ ಲಕ್ಷಣಗಳು ಕಂಡು ಬರುತ್ತಿವೆ. ಆಗಸ್ಟ್, ಸೆಪ್ಟೆಂಬರ್ ತಿಂಗಳಿನಂತೆಯೇ ಅಕ್ಟೋಬರ್ ತಿಂಗಳಿನಲ್ಲೂ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಮುಂಗಾರು ಹಂಗಾಮಿನ ಬೆಳೆಗಳು ತೇವಾಂಶ ಕೊರತೆಯಿಂದ ಒಣಗುತ್ತಿವೆ. ರೈತರು ಮಳೆಯನ್ನೇ ಎದುರು ನೋಡುವಂತಾಗಿದೆ.

ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ: ರಾಯಚೂರು, ದೇವದುರ್ಗದಲ್ಲಿ AIMIM ಸ್ಪರ್ಧೆಗೆ ಸಿದ್ಧತೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಕರ್ನಾಟಕದಲ್ಲಿ ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳ ಹಿನ್ನೆಲೆಯಲ್ಲಿ, ಆಲ್ ಇಂಡಿಯಾ ಮಜ್ಲಿಸ್–ಎ–ಇತ್ತೆಹಾದುಲ್ ಮುಸ್ಲಿಮೀನ್ (೦ಖಒಖಒ) ಪಕ್ಷವು ರಾಯಚೂರು ಜಿಲ್ಲೆ ಹಾಗೂ ದೇವದುರ್ಗ ತಾಲೂಕಿನಲ್ಲಿ ಚುನಾವಣಾ ಸ್ಪರ್ಧೆಗೆ ಸಿದ್ಧತೆ ನಡೆಸಿದೆ ಎಂದು ೦ಖಒಖಒ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ ತಿಳಿಸಿದ್ದಾರೆ.



ರಾಯಚೂರು ಮತ್ತು ದೇವದುರ್ಗ ವ್ಯಾಪ್ತಿಯ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಕ್ಷೇತ್ರಗಳಲ್ಲಿ ಪಕ್ಷದ ವತಿಯಿಂದ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ರಾಜ್ಯಾಧ್ಯಕ್ಷರ ನಿರ್ದೇಶನ ಮತ್ತು ಮಾರ್ಗದರ್ಶನದಂತೆ ಚುನಾವಣಾ ಕಾರ್ಯತಂತ್ರ ರೂಪಿಸಲಾಗುವುದು ಎಂದು ಅವರು ಹೇಳಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಪಕ್ಷದ ಸಂಘಟನೆಯನ್ನು ಬಲಪಡಿಸುವುದು ಹಾಗೂ ರಾಜಕೀಯವಾಗಿ ಸಕ್ರಿಯವಾಗಿ ಪಾಲ್ಗೊಳ್ಳುವುದು ೦ಖಒ–ಖಒ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಚುನಾವಣಾ ಸಿದ್ಧತೆಗಳಲ್ಲಿ ತೊಡಗಿಸಿಕೊಂಡಿದ್ದು, ಅಭ್ಯರ್ಥಿಗಳ ಆಯ್ಕೆ ಸೇರಿದಂತೆ ಮುಂದಿನ ಕಾರ್ಯತಂತ್ರಗಳನ್ನು ಪಕ್ಷದ ವರಿಷ್ಠರ ಮಾರ್ಗದರ್ಶನದಲ್ಲಿ ರೂಪಿಸಲಾಗುವುದು ಎಂದು ರಾಯ ಚೂರು ನಗರ ಘಟಕದ ಅಧ್ಯಕ್ಷರಾದ ಶಬ್ಬೀರ್ ಅಹ್ಮದ್ ಹೌದಡಿ ತಿಳಿಸಿದರು.

ರಾಯಚೂರು ಜಿಲ್ಲೆ ಹಾಗೂ ದೇವದುರ್ಗ ತಾಲೂಕಿನಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ೦ಖಒಖಒ ಸ್ಪರ್ಧಿಸಲು ಮುಂದಾಗಿರುವುದು ಸ್ಥಳೀಯ ರಾಜಕೀಯ ವಲಯದಲ್ಲಿ ಗಮನ ಸೆಳೆದಿದೆ.

ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ನಾಡಹಬ್ಬ ಜಂಬುಸವಾರಿಯಲ್ಲಿ ಚಿನ್ನದ ಅಂಬಾರಿ ಹೊರುವ ಪ್ರಧಾನ ಆನೆ ಪ್ರಶಾಂತ್ ಆಯ್ಕೆಯಾಗಿದ್ದಾನೆ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಾಡಹಬ್ಬ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ವಿಜಯದಶಮಿ ಜಂಬೂಸವಾ–ರಿಯಲ್ಲಿ ಈ ಬಾರಿ ಚಿನ್ನದ ಅಂಬಾರಿಯನ್ನು ಹೊರುವ ಪ್ರಧಾನ ಆನೆಯಾಗಿ ಅನುಭವಿ 'ಪ್ರಶಾಂತ್' ಆನೆಯನ್ನು ಆಯ್ಕೆ ಮಾಡಲಾಗಿದೆ. ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ರಾಮಯ್ಯನವರು ಪತ್ರಿಕ ಮಾಧ್ಯಮದವರಿಗೆ ಮಾಹಿತಿ ನೀಡಿದರು

ಈ ಕುರಿತು ಇಂದು ಮೈಸೂರು ಅರಮನೆ ಮಂಡಳಿಯಲ್ಲಿ ಸಚಿವರುಪತ್ರಿಕಾಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಗರಾಭಿವೃದ್ಧಿ ಸಚಿವರಾದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು 54 ವರ್ಷ ವಯಸ್ಸಿನ ಪ್ರಶಾಂತ್ ಕಳೆದ 18 ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ಅನುಭವ, ಆರೋಗ್ಯ, ಶಾಂತ ಸ್ವಭಾವ ಹಾಗೂ ಅಂಬಾರಿ ಹೊರುವ ಸಾಮರ್ಥ್ಯವನ್ನು ಪರಿಶೀಲಿಸಿ ಆಯ್ಕೆ ಮಾಡಲಾಗಿದೆ. ಆನೆಗಳ ಆರೋಗ್ಯ, ಸುರಕ್ಷತೆ, ಪೌಷ್ಟಿಕ ಆಹಾರ ಮತ್ತು ವಿಶ್ರಾಂತಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಎಂದು ಸುದ್ದಿ ಗಾರ–ರಿಗೆ ತಿಳಿಸಿದ ಸಚಿವರು ಅಂಬಾರಿ ಹೊರುವ ಮೀಸಲು ಆನೆಯಾಗಿ ಧನಂಜಯ, ನಿಶಾನೆ ಆನೆಯಾಗಿ ಅಭಿಮನ್ಯು, ನೌಪತ್ ಆನೆಯಾಗಿ ಗೋಪಿ ಹಾಗೂ ಕುಮ್ಕಿ ಆನೆಗಳಾಗಿ ಕಾವೇರಿ ಮತ್ತು ರೂಪ ಆಯ್ಕೆಯಾಗಿದ್ದಾರೆ. ಏಕಲವ್ಯ, ಸುಗ್ರೀವ, ಲಕ್ಷ್ಮೀ, ಶ್ರೀಕಂಠ, ಶ್ರೀರಾಮ ಹಾಗೂ ಮಹೇಂದ್ರ ಆನೆಗಳು ಸಾಲಾನೆ ತಂಡದಲ್ಲಿರಲಿವೆ. ಎಂದು ಸಚಿವರು ಮಾಹಿತಿ ಹಂಚಿಕೊಂಡರು ಈ ಬಾರಿಯ ದಸರಾಗೆ ಕೇರಳ ಮತ್ತು ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಆಗಮಿಸಲು ಸಮ್ಮತಿ ಸೂಚಿಸಿದ್ದು, ಸುಮಾರು 40 ಪ್ರಸಿದ್ಧ ಸಿನಿಮಾ ಕಲಾವಿದರು ಭಾಗವಹಿಸುವ ನಿರೀಕ್ಷೆಯಿದೆ.



ನಾಡಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ಇದೇ ಸಂದರ್ಭದಲ್ಲಿ ಪ್ರಧಾನ ಅಂಬಾರಿ ಆನೆ ಪ್ರಶಾಂತ್‌ನ ಆಯ್ಕೆಯನ್ನು ಸಾರುವ ಬಿತ್ತಿಚಿತ್ರವನ್ನು ಸಚಿವರು ಬಿಡುಗಡೆ ಮಾಡಿದರು ಈ ಸಂದರ್ಭದಲ್ಲಿ ಸಚಿವರಾದ ಕೆ.ಎಸ್. ಬಸವಂತಪ್ಪ, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಜಿಲ್ಲಾಧಿಕಾರಿ ಶ್ರೀ ಲಕ್ಷ್ಮೀಕಾಂತರೆಡ್ಡಿ ಜಿ., ಅರಣ್ಯ ಇಲಾಖೆ ಹಾಗೂ ಮೈಸೂರು ಅರಮನೆ ಮಂಡಳಿಯ ಹಿರಿಯ ಅಧಿಕಾರಿಗಳು ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

ಅಕ್ಟೋಬರ್ 23ರಂದು 'ಚಂದ್ರಹಾಸ' ಸಿನಿಮಾ ಬಿಡುಗಡೆ

ಮೈಲಾಪುರ ಗ್ರಾಮದಲ್ಲಿ ಟ್ರೈಲರ್ ಬಿಡುಗಡೆ; ಉತ್ತರ ಕರ್ನಾಟಕದ ಕಲಾವಿದರಿಗೆ ಪ್ರೋತ್ಸಾಹ ನೀಡಲು ಚಿತ್ರತಂಡದ ಮನವಿ

ನೈಜ್ಯ ದೆಸೆ ನ್ಯೂಸ್

ಕಾರಟಗಿ: ಉತ್ತರ ಕರ್ನಾಟಕದ ಹೊಸ ಪ್ರತಿಭೆಗಳ ಸಂಗಮವಾಗಿರುವ 'ಚಂದ್ರಹಾಸ' ಕನ್ನಡ ಚಲನಚಿತ್ರವು ಇದೇ ಅಕ್ಟೋಬರ್ 23ರಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಈ ಹಿನ್ನೆಲೆಯಲ್ಲಿ ಕಾರಟಗಿ ತಾಲೂಕಿನ ಮೈಲಾಪುರ ಗ್ರಾಮದಲ್ಲಿ ಚಿತ್ರದ ಪ್ರಚಾರದ ಅಂಗವಾಗಿ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಕಾಮಿಡಿ ಕಿಲಾಡಿ ಖ್ಯಾತಿಯ ಹ–ರೀಶ್ ಹಿರಿಯೂರು ನಾಯಕನಾಗಿ ನಟಿಸಿರುವ ಈ ಚಿತ್ರವು ಅವರ ಮೊದಲ ಸಿನಿಮಾ ಪ್ರಯತ್ನವಾಗಿದ್ದು, ಆನಂದ ಕಲಕಬಂಡಿ ಚೊಚ್ಚಲ ನಿರ್ದೇಶನ ಮಾಡಿದ್ದಾರೆ. ಬಸನಗೌಡ ಪಾಟೀಲ್ ಮೈಲಾಪುರ ಅವರ ಅಮರಶ್ರೀ ಕಂಬೈನ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. 'ಚಂದ್ರಹಾಸ' ಚಿತ್ರದಲ್ಲಿ ಪ್ರೀತಿ, ಪ್ರೇಮ, ಗೆಳೆತನ, ವಾತ್ಸಲ್ಯ, ಭಾವನಾತ್ಮಕ ಸನ್ನಿವೇಶಗಳು ಹಾಗೂ ಮಧ್ಯಮ ವರ್ಗದ ಜನರ ಬದುಕಿನ



ಜಂಜಾಟಗಳನ್ನು ಮನಮುಟ್ಟುವ ರೀತಿಯಲ್ಲಿ ಚಿತ್ರಿಸಲಾಗಿದೆ. ಚಂದ್ರ ಎಂಬ ಸ್ನೇಹಿತನ ಸುತ್ತ ಸಾಗುವ ಕಥೆಯು ನಗು, ಭಾವನೆ ಮತ್ತು ಜೀವನದ ಮೌಲ್ಯಗಳನ್ನು ಒಳಗೊಂಡಿದೆ.

ನಿರ್ದೇಶಕ ಆನಂದ ಕಲಕಬಂಡಿ* ಮಾತನಾಡಿ, "ಚಂದ್ರಹಾಸ ಚಿತ್ರದ ಕಥೆ ಜೀವನದಲ್ಲಿ ನಾವು ಕಂಡ ಹಲವು ವ್ಯಕ್ತಿಗಳ ಮತ್ತು ಪಾತ್ರಗಳ ಅನುಭವಗಳಿಂದ ರೂಪುಗೊಂಡಿದೆ. ಸಮಾಜದಲ್ಲಿ ಕಾಣುವ ನೈಜ ಬದುಕಿನ ಸನ್ನಿವೇಶಗಳು ಈ ಚಿತ್ರದಲ್ಲಿವೆ. ಪ್ರತಿಯೊಬ್ಬರೂ ನೋಡಬೇಕಾದ ಸಿನಿಮಾ ಇದಾಗಿದ್ದು, ಪ್ರೇಕ್ಷಕರಿಗೆ ಖಂಡಿತ ಇಷ್ಟವಾಗಲಿದೆ ಎಂಬ ವಿಶ್ವಾಸವಿದೆ" ಎಂದರು.

ನಾಯಕಿ ಛಾಯಶ್ರೀ* ಮಾತನಾಡಿ, "ನಾನು ಈ ಚಿತ್ರದಲ್ಲಿ ಶ್ರೀದೇವಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ನನ್ನ ಪಾತ್ರದಲ್ಲಿ ಸಕಾರಾತ್ಮಕ ಗುಣಗಳ ಜೊತೆಗೆ ನಕಾರಾತ್ಮಕ ಅಂಶಗಳೂ ಇವೆ. ವಿಭಿನ್ನ ಅನುಭವ ನೀಡುವ ಪಾತ್ರ ಇದಾಗಿದೆ" ಎಂದು ತಿಳಿಸಿದರು.

ನಾಯಕ ನಟ ಹರೀಶ್ ಹಿರಿಯೂರು* ಮಾತನಾಡಿ, "ನಾನು ರಂಗಭೂಮಿಯಿಂದ ಬಂದ ಕಲಾವಿದ. ಆರಂಭದಲ್ಲಿ ಕಾಮಿಡಿ ಮೂಲಕ ಕಲಾವಿದನಾಗಿ ಗುರುತಿಸಿಕೊಂಡಿದ್ದೆ. ಇದೀಗ 'ಚಂದ್ರಹಾಸ' ಚಿತ್ರದ ಮೂಲಕ ಬೆಳ್ಳಿತೆರೆಗೆ ಪ್ರವೇಶಿಸುತ್ತಿರುವುದು ತುಂಬಾ ಸಂತೋಷ ತಂದಿದೆ. ಈ ಚಿತ್ರದ ಮೂಲಕ ನನಗೆ 'ರಂಗರತ್ನ' ಎಂಬ ಬಿರುದು ದೊರೆತಿರುವುದು ಹೆಮ್ಮೆಯ ಸಂಗತಿ. ನಮ್ಮ ಉತ್ತರ ಕರ್ನಾಟಕದ ಅನೇಕ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ, ಬೆಳೆಸಿ, ಪ್ರೋತ್ಸಾಹಿಸುವ ಅಗತ್ಯವಿದೆ. ಅಕ್ಟೋಬರ್ 23ರಂದು ಸಿನಿಮಾ ಬಿಡುಗಡೆಯಾಗಲಿದ್ದು, ಎಲ್ಲರೂ ಚಿತ್ರಮಂದಿರಗಳಿಗೆ ತೆರಳಿ ಸಿನಿಮಾ ವೀಕ್ಷಿಸಿ ಕಲಾವಿದರನ್ನು ಬೆಂಬಲಿಸಬೇಕು" ಎಂದು ಮನವಿ ಮಾಡಿದರು.

ಚಿತ್ರ ನಿರ್ಮಾಣಕ್ಕೆ ತನು, ಮನ ಮತ್ತು ಧನದಿಂದ ಸಹಕಾರ ನೀಡಿದ ಬಸವಂತಗೌಡರು ಮಾತನಾಡಿ, "ಚಂದ್ರಹಾಸ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ಪ್ರೇಕ್ಷಕರು ಚಿತ್ರಮಂದಿರಗಳಿಗೆ ತೆರಳಿ ಸಿನಿಮಾ ವೀಕ್ಷಿಸಿ ಚಿತ್ರತಂಡವನ್ನು ಪ್ರೋತ್ಸಾಹಿಸಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಲಾಪುರ ಗ್ರಾಮದ ಬಸವರಾಜ ಕಲಮಂಗಿ, ದೊಡ್ಡ ಬಸವ ಕುರ್ತಕೋಟಿ, ದೇವರಾಜ ಗೌಡ, ಪೊಲೀಸ್ ಪಾಟೀಲ್, ಬಸವರಾಜ ಕುರ್ತುಕೋಟೆ, ಬಸವರಾಜ ಗೋಡಿನಾಳ, ಮಲ್ಲೇಶಪ್ಪ ಮಕಾಶಿ, ದೇವೇಂದ್ರಪ್ಪ ಬೊಮ್ಮನಾಳ, ಶಿವರಾಜ ಹಾದಿಮನಿ ಸೇರಿದಂತೆ ಗ್ರಾಮದ ಪ್ರಮುಖರು ಹಾಗೂ ಇತರರು ಉಪಸ್ಥಿತರಿದ್ದು, ಚಿತ್ರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಉತ್ತರ ಕರ್ನಾಟಕದ ಪ್ರತಿಭೆಗಳಿಗೆ ವೇದಿಕೆಯಾಗಿರುವ 'ಚಂದ್ರಹಾಸ' ಚಿತ್ರಕ್ಕೆ ಪ್ರೇಕ್ಷಕರ ಪ್ರೋತ್ಸಾಹ ದೊರೆಯಲಿ ಎಂಬುದು ಚಿತ್ರತಂಡದ ಆಶಯವಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101